ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ
Karnataka Minorities Development Corporation Ltd
12th Floor,Main Tower, Visweswaraya Centre,Dr.B.R.Ambedkar Veedhi,Bengaluru -560001
Telephone: 080-22864782, Email:kmdc.ho.info@gmail.com,Website: www.kmdc.kar.nic.in

ಕಅಅನಿ/ಜಿವ್ಯ/ಮಾ.ಹ/ಸಿ.ಆರ್/2020-21 ದಿನಾಂಕ: 04-12-2020

**ಅಧಿಸೂಚನೆ:**

ಭಾರತ ಸರ್ಕಾರದ 2005ರ ಮಾಹಿತಿ ಹಕ್ಕು ಕಾಯ್ದೆ (ಕೇಂದ್ರ ಕಾಯ್ದೆ ಸಂಖ್ಯೆ:22/2005) ಚಾಪ್ಟರ್-11 ಸೆಕ್ಷನ್ 4(1)(ಅ) ಅಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರವಾದ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಾರ್ವಜನಿಕ ತಿಳುವಳಿಕೆಗಾಗಿ ನೀಡಲಾಗಿದೆ.

1) 4(1)(ಬಿ)(i)ರನ್ವಯ, ಸಂಸ್ಥೆಯ ರಚನೆ ಹಾಗೂ ಅದರ ಪ್ರಕಾರ್ಯಗಳು ಮತ್ತು ಕರ್ತವ್ಯಗಳು.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು 07.02.1986ರಲ್ಲಿ ಸ್ಥಾಪನೆಯಾಗಿದ್ದು, ಈ ನಿಗಮದಿಂದ ಮತೀಯ ಅಲ್ಪಸಂಖ್ಯಾತರು ಅಂದರೆ ಮುಸಲ್ಮಾನರು, ಕ್ರೈಸ್ತರು, ಜೈನರು, ಬೌದ್ಧರು, ಸಿಖ್‌ರು ಮತ್ತು ಪಾರ್ಸಿ ಜನಾಂಗದವರ ಏಳಿಗೆಗಾಗಿ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯರೂಪಕ್ಕೆ ತರಲಾಗುತ್ತಿದೆ.

## ನಿಗಮದ ಸ್ಥಾಪನೆ

ಕರ್ನಾಟಕ ರಾಜ್ಯದ ಮತೀಯ ಅಲ್ಪಸಂಖ್ಯಾತರ ಜನಸಂಖ್ಯೆಯು 2011ರ ಜನಗಣತಿ ಪ್ರಕಾರ 96,00,475 ಇದ್ದು, ಈ ಪ್ರಮಾಣವು ರಾಜ್ಯದ ಒಟ್ಟು ಜನಸಂಖ್ಯೆಯ ಶೇ.15.92 ಆಗಿರುತ್ತದೆ. ರಾಜ್ಯದಲ್ಲಿ ವಾಸಿಸುತ್ತಿರುವ ಮುಸಲ್ಮಾನರು, ಕ್ರೈಸ್ತರು, ಜೈನರು, ಬೌದ್ಧರು, ಸಿಖ್‌ರು ಮತ್ತು ಪಾರ್ಸಿ ಜನಾಂಗದವರು ಮತೀಯ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿರುತ್ತಾರೆ. ಅಲ್ಪಸಂಖ್ಯಾತ ಸಮುದಾಯದ ಬಹುಪಾಲು ಜನರು ಬಡತನದ ರೇಖೆಯ ಕೆಳಗೆ ಸುತ್ತುತ್ತಿದ್ದು, ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯು ಚಿಂತಾಜನಕವಾಗಿದೆ.

## ನಿಗಮದ ಉದ್ದೇಶ

ಮತೀಯ ಅಲ್ಪಸಂಖ್ಯಾತ ಸಮುದಾಯದ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸುವ ಜವಾಬ್ದಾರಿಯನ್ನು ಮೊದಲು ಸ್ಥಾಪಿಸಿದ್ದ ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ (ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಎಂದು ಪುನರ್ನಾಮಕರಣಗೊಂಡಿದೆ) ವಹಿಸಲಾಗಿತ್ತು. ಹೀಗಿದ್ದರೂ, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳ್ಳುತ್ತಿದ್ದ ಯೋಜನೆಗಳು ಮತೀಯ ಅಲ್ಪಸಂಖ್ಯಾತರ ಸ್ಥಿತಿಗತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಹೆಚ್ಚಿನ ಪರಿಣಾಮವನ್ನು ಬೀರುತ್ತಿಲ್ಲ ಎಂಬ ಅಂಶದಿಂದಾಗಿ ಮತ್ತು ರಾಜ್ಯದ ಮತೀಯ

ಅಲ್ಪಸಂಖ್ಯಾತರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಉತ್ತಮಪಡಿಸುವ ಸಲುವಾಗಿ ಹಾಗೂ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಏಕೈಕ ಉದ್ದೇಶದಿಂದ ಆಗಿನ ಮುಖ್ಯಮಂತ್ರಿಯಾಗಿದ್ದ ದಿವಂಗತ ರಾಮಕೃಷ್ಣ ಹೆಗ್ಡೆಯವರ ನೇತೃತ್ವದ ಸರ್ಕಾರವು ದಿನಾಂಕ 07.02.1986ರಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಎಂಬ ಪ್ರತ್ಯೇಕ ನಿಗಮವನ್ನು ಸ್ಥಾಪಿಸಿತು.

ರಾಜ್ಯದ ಮತೀಯ ಅಲ್ಪಸಂಖ್ಯಾತ ಸಮುದಾಯದ ಕಡುಬಡವರನ್ನು ಸ್ವಾವಲಂಬಿಗಳನ್ನಾಗಿ ಮಾಡುವುದು ಮತ್ತು ಅವರಿಗೆ ಸಾಮಾಜಿಕ ನ್ಯಾಯ ಕಲ್ಪಿಸುವುದು ಹಾಗೂ ಅವರ ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯನ್ನು ಸುಧಾರಿಸುವುದು ನಿಗಮದ ಮುಖ್ಯ ಉದ್ದೇಶವಾಗಿದೆ.

## ನಿಗಮದ ರಚನೆ

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ರಾಜ್ಯ ಸರ್ಕಾರ ಸ್ವಾಮ್ಯದ ಉದ್ಯಮವಾಗಿದ್ದು, 1956ರ ಕಂಪೆನಿ ಅಧಿನಿಯಮದನ್ವಯ ಸ್ಥಾಪಿಸಲ್ಪಟ್ಟಿದೆ. ನಿಗಮದ ಇದುವರೆಗಿನ ಅಧಿಕೃತ ಷೇರು ಬಂಡವಾಳವು ರೂ.600.00 ಕೋಟಿ ಇರುತ್ತದೆ, ಪಾವತಿಸಿದ ಬಂಡವಾಳ ರೂ.99.78 ಕೋಟಿ ಇರುತ್ತದೆ. ಕರ್ನಾಟಕ ಸರ್ಕಾರದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಆಡಳಿತಾತ್ಮಕ ಮೇಲ್ವಿಚಾರಣೆಯಲ್ಲಿ ನಿಗಮವು ಕಾರ್ಯನಿರ್ವಹಿಸುತ್ತಿದೆ. ನಿಗಮದ ನೋಂದಾಯಿತ ಕಛೇರಿ ಬೆಂಗಳೂರಿನಲ್ಲಿ ಇದ್ದು, ಇದರ ಜಿಲ್ಲಾ ಕಛೇರಿಗಳು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಇರುತ್ತವೆ. ರಾಜ್ಯ ಸರ್ಕಾರ ಪ್ರಾಯೋಜಿತ ಯೋಜನೆಗಳನ್ನು ನಿಗಮದ ಜಿಲ್ಲಾ ಕಛೇರಿಗಳ ಮೂಲಕ ಅನುಷ್ಠಾನಗೊಳಿಸಿ ಮತೀಯ ಅಲ್ಪಸಂಖ್ಯಾತರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸುವುದು ನಿಗಮದ ಉದ್ದೇಶವಾಗಿದೆ.

## ನಿಗಮದ ಸಂಘಟನಾ ವ್ಯವಸ್ಥೆ

ನಿಗಮದ ನಿರ್ದೇಶಕರ ಮಂಡಳಿಗೆ, ಸರ್ಕಾರದಿಂದ ನಾಮ ನಿರ್ದೇಶಿತಗೊಂಡಿರುವ ಮಾನ್ಯ ಅಧ್ಯಕ್ಷರು ನೇಮಕಗೊಂಡಿರುತ್ತಾರೆ. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ನಿಗಮದ ಆಡಳಿತಾತ್ಮಕ ಮುಖ್ಯಸ್ಥರಾಗಿರುತ್ತಾರೆ. ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಆಡಳಿತಾತ್ಮಕ ನಿಯಂತ್ರಣದಲ್ಲಿ ಕೇಂದ್ರ ಕಛೇರಿಯಲ್ಲಿ ಪ್ರಧಾನ ವ್ಯವಸ್ಥಾಪಕರು,ಉಪ ಪ್ರಧಾನ ವ್ಯವಸ್ಥಾಪಕರು(ಯೋಜನೆ), ಪ್ರಧಾನ ಹಣಕಾಸು ಅಧಿಕಾರಿ ಉಪ ಪ್ರಧಾನ ವ್ಯವಸ್ಥಾಪಕರು(ಹಣಕಾಸು), ಕಂಪೆನಿ ಕಾರ್ಯದರ್ಶಿ, ಉಪ ಪ್ರಧಾನ ವ್ಯವಸ್ಥಾಪಕರು(ಆಡಳಿತ ಮತ್ತು ಸಿಬ್ಬಂದಿ)(ಪ್ರಭಾರ)ಲೆಕ್ಕ ಅಧೀಕ್ಷಕರು, ಅಭಿವೃದ್ಧಿ ಅಧಿಕಾರಿ, ಅಭಿವೃದ್ಧಿ ಪರಿವೀಕ್ಷಕರು ಹಾಗೂ ಪ್ರಥಮ ದರ್ಜೆ ಸಹಾಯಕರು ಹಾಗೂ ಇತರೆ ಸಿಬ್ಬಂದಿ ವರ್ಗದವರು ಕರ್ತವ್ಯನಿರ್ವಹಿಸುತ್ತಿದ್ದಾರೆ. ನಿಗಮದ ಜಿಲ್ಲಾ ಕಛೇರಿಗಳಲ್ಲಿ ಜಿಲ್ಲಾ ವ್ಯವಸ್ಥಾಪಕರು, ಅಭಿವೃದ್ಧಿ ಅಧಿಕಾರಿ, ಅಭಿವೃದ್ಧಿ ಪರಿವೀಕ್ಷಕ ಮತ್ತು ಕಂಪ್ಯೂಟರ್ ಆಪರೇಟರ್ ಗಳನ್ನು ಒಳಗೊಂಡ ಸಿಬ್ಬಂದಿಗಳು ಕರ್ತವ್ಯನಿರ್ವಹಿಸುತ್ತಿದ್ದಾರೆ. ಇದರನ್ವಯ ಸಿಬ್ಬಂದಿಗಳನ್ನು ನೇಮಕಾತಿ ಮಾಡಲು ಪರಿಷ್ಕೃತ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

ಪ್ರಸ್ತುತ ಕರ್ನಾಟಕ ಅಲ್ಪಸಂಖ್ಯಾತರ ಜನಾಂಗದ ಜನರು ಸ್ವಯಂ ಉದ್ಯೋಗ ಕೈಗೊಂಡು, ಅವರ ಆರ್ಥಿಕಾಭಿವೃದ್ಧಿ ಸಾಧಿಸಲು ನಿಗಮವು 2020-21ನೇ ಸಾಲಿಗೆ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

(ಅ) ರಾಜ್ಯ ಸರ್ಕಾರದ ಯೋಜನೆಗಳು:

1. ವೃತ್ತಿ ಪ್ರೋತ್ಸಾಹ ಯೋಜನೆ(ಪರಿಷ್ಕøತ)
2. ಅರಿವು (ವಿದ್ಯಾಭ್ಯಾಸ) ಸಾಲ ಯೋಜನೆ (ಪರಿಷ್ಕøತ)
3. ಶ್ರಮಶಕ್ತಿ ಸಾಲ ಯೋಜನೆ,
4. ಸಣ್ಣ (ಮೈಕ್ರೋ)ಸಾಲ ಮತ್ತು ಸಹಾಯಧನ ಯೋಜನೆ,
5. ಮೈಕ್ರೋ ವೈಯುಕ್ತಿಕ(ಸಣ್ಣ) (ಕೋವಿಡ್ 19) ಸಾಲ ಯೋಜನೆ
6. ಗಂಗಾ ಕಲ್ಯಾಣ ಯೋಜನೆ,
7. ಪಶುಸಂಗೋಪನೆ ಯೋಜನೆ, (ಗ್ರಾಮೀಣ ಮಹಿಳೆಯರಿಗೆ ಮಾತ್ರ)
8. ಅಲ್ಪಸಂಖ್ಯಾತರ ರೈತರ ಕಲ್ಯಾಣ ಯೋಜನೆ (ಕೃಷಿ ಯಂತ್ರೋಪಕರಣ ಕೊಳ್ಳಲು),
9. ಆಟೋ ಮೊಬೈಲ್ ಸರ್ವೀಸ್, ಬಿದರಿ ಮತ್ತು ರೇಷ್ಮೆ, ಚನ್ನಪಟ್ಟಣ ಕರಕುಶಲ ಚಟುವಟಿಕೆಗಳೀಗೆ ತರಬೇತಿ ಪ್ರೋತ್ಸಾಹ ಹಾಗು ಸಾಲ ಮತ್ತು ಸಹಾಯಧನ ಹಾಗೂ ಮೂಲಭೂತ ಸೌಕರ್ಯ ಯೋಜನೆಗಳಲ್ಲಿ ಸೌಕರ್ಯ ನೀಡಲಾಗುವುದು.
10. ಟ್ಯಾಕ್ಸಿ/ಗೂಡ್ಸ್ ವಾಹನ ಖರೀದಿಗಾಗಿ ಸಹಾಯಧನ ಯೋಜನೆ(ಪರಿಷ್ಕøತ)
11. ಮನೆ ಮಳಿಗೆ ಯೋಜನೆ,
12. ಗೃಹ ನಿರ್ಮಾಣ – ಮಾರ್ಜಿನ್ ಹಣ ಸಾಲ ಯೋಜನೆ
13. ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮದ (ಎನ.ಎಂ.ಡಿ.ಎಫ.ಸಿ)ಯೋಜನೆಗಳು
    i. ಅವಧಿ ಸಾಲ ಯೋಜನೆ,
    ii. ವಿದ್ಯಾಭ್ಯಾಸ ಸಾಲ ಯೋಜನೆ,

**ರಾಜ್ಯ ಸರ್ಕಾರದ ಯೋಜನೆಗಳು:-**

**1. ವೃತ್ತಿ ಪ್ರೋತ್ಸಾಹ ಯೋಜನೆ(ಪರಿಷ್ಕøತ):-**

ಈ ಯೋಜನೆಯಲ್ಲಿ ವಿವಿಧ ಬ್ಯಾಂಕುಗಳು/ಹಣಕಾಸು ಸಂಸ್ಥೆಗಳ ಮೂಲಕ ಮತೀಯ ಅಲ್ಪಸಂಖ್ಯಾತ ಜನರು ಕೈಗೊಳ್ಳುವ ವ್ಯಾಪಾರ, ಸೇವಾ ಉದ್ದಿಮೆಗಳು, ಕೈಗಾರಿಕೆಗಳು ಹಾಗೂ ಕೃಷಿ ಆಧಾರಿತ ಚಟುವಟಿಕೆಗಳಿಗೆ ಬ್ಯಾಂಕು/ಹಣಕಾಸು ಸಂಸ್ಥೆಗಳ ಮೂಲಕ ಸಾಲ ಸೌ¨ಭ್ಯ ದೊರಕಿಸಿ ಕೊಡಲಾಗುವುದು. ವಿವರ ಈ ಕೆಳಕಂಡಂತೆ ಇರುತ್ತದೆ.

ಒಟ್ಟು ಸಾಲ ಮೊತ್ತ ರೂ.1.00 ಲಕ್ಷದೊಳಗೆ ಇರುವ ಚಟುವಟಿಕೆಗಳಿಗೆ ಶೇ.50 ರಷ್ಟು ಸಾಲ ಹಾಗೂ ಶೇ.50 ರಷ್ಟು ಸಹಾಯಧನದೊಂದಿಗೆ ಬ್ಯಾಂಕ ಸಾಲದ ಬದಲಾಗಿ ಕರ್ನಾಟಕ ಅಲ್ಪಸಂಖ್ಯಾತ ಅಬಿವೃರ್ದಧಿ ನಿಗಮದ ವತಿಯಿಂದಲೇ ಸಾಲ ಸೌಲಭ್ಯ ಅನುಷ್ಠಾನಗೊಳಿಸಲು ಅನುಕೂಲವಾಗುವಂತೆ ಪರಿಷ್ಕøತ ಸರ್ಕಾರಿ ಆದೇಶ ಹೋರಡಿಸಲಾಗಿದೆ.

ಇದರನ್ವಯ 2020-21ನೇ ಸಆಲಿ ಲಅನ್ವಯವಾಗಯುವಂತೆ ಬ್ಯಾಂಕ್ ಸಾಲದ ಬದಲಾಗಿ ಕೆ.ಎಂ.ಡಿ.ಸಿ. ನಿಗಮದ ವತಿಯಿಂದಲೇ ಒಟ್ಟು ಸಾಲದ ಮೊತ್ತ ರಊ.1.00ಲಕ್ಷ(ಒಂದು ಲಕ್ಷ ರೂಫಾಯಿಗಳೂ) ಅದರಲ್ಲಿ ಶೇ.50 ರಷ್ಟು ಸಾಲ, ಶೇ.50 ರಷ್ಟು ಸಹಾಯ ಧನದೊಂದಿಗೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಷ್ಠಾನಗೊಳಿಸಲು ಅನುಮತಿ ನೀಡಿ ಕ್ಲೈಮ್ ಪತ್ರದ ಜೊತೆಗೆ ಕಮಿಟ್‌ಮೆಂಟ್ ಲೇಟರ್ನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.

**ಷರತ್ತುಗಳು:**

1. ಈ ಸಾಲಸೌಲಭ್ಯವನ್ನು ಪಡೆಯಲು ಮತೀಯ ಅಲ್ಪಸಂಖ್ಯತರ ಸಮುದಾಯದ ಅರ್ಹ ಫಲಾನುಭವಿಗಳಿಗೆ ನೀಡತಕ್ಕದ್ದು
2. ಅರ್ಜಿದಾರರು ರಾಜ್ಯದ ಖಾಯಂ ನಿವಾಸಿಗಳಾಗಿರತಕ್ಕದ್ದು
3. ಅರ್ಜಿದಾರರ ವಯಸ್ಸು 18 ರಿಂದ 45 ವರ್ಷಗಳಾಗಿರತಕ್ಕದ್ದು
4. ಮತೀಯ ಅಲ್ಪಸಂಖ್ಯಾತರ ಸಮುದಾಯದ ಮಹಿಳೆಯರಿಗೆ ಆದ್ಯತೆ ನೀಡುವುದು.
5. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ಮಿತಿಯು ರೂ.103000/-((ನಗರ ಪ್ರದೇಶ) ಮತ್ತು ರೂ.81000/-(ಗ್ರಾಮೀಣ ಪ್ರದೇಶ) ಮೀರಿರಬಾರದು
6. ಅರ್ಜಿದಾರರ ಕುಟುಂಬದ ಯಾವುದೇ ಸದಸ್ಯರು ಕೇಂದ್ರ/ರಾಜ್ಯ ಸರ್ಕಾರದ ಸೇವೆಯಲ್ಲಿರಬಾರದು
7. ಈ ಯೋಜನೆಗೆ ಅರ್ಜಿ ಸಲ್ಲಿsಸುವ ಯಾವುದೇ ಅರ್ಜಿದಾರರು ಅಥವಾ ಅವರ ಕುಟುಂಬದ ಸದಸ್ಯರು ಈ ಹಿಂದೆ ನಿಗಮದಿಂದ ಯಾವುದೇ ಸಾಲ ಸೌಲಭ್ಯ ಪಡೆದಿರಬಾರದು
8. ಈ ಹಿಂದಿನ ಸ್ವಯಂ ಉದ್ಯೋಗ ಮತ್ತು ವೃತ್ತ ಪ್ರೋತ್ಸಾಹ ಯೋಜನೆಯಲ್ಲಿ ಸೂಚಿಸಲಾಗಿರುವ ಎಲ್ಲಾ ಚಟುವಟಿಕೆಗಳೂ ಉದ್ದೇಶಿತ ಯೋಜನೆಗೆ ಅನ್ವಯವಾಗತಕ್ಕದ್ದು.
9. ಈ ಯೋಜನೆ ಒಟ್ಟು ಸಾಲದ ಮೊತ್ತ ರೂ.1.00ಲಕ್ಷ ಇದರಲ್ಲಿ ಶೇ.50ರಷ್ಟು ಸಾಲ ಶೇ.50ರಷ್ಟು ಸಹಾಯ ಧನವಾಗಿರತಕ್ಕದ್ದು.
10. ಸದರಿ ಯೋಜನೆಯ ಸಾಲ ಮತ್ತು ಸಹಾಯಧನವನ್ನು ಕೆ.ಎಂ.ಡಿ.ಸಿ. ನಿಗಮದ ವತಿಯಿಂದಲೇ ಬಿಡುಗಡೆಗೊಳಿಸುವುದು.
11. ರಾಜ್ಯದ ಎಲ್ಲಾ ಜಿಲ್ಲಾಗಳ ಫಲಾನುಭವಿಗೂ ಪ್ರಾತಿನಿಧ್ಯ ಒದಗಿಸುವ ದೃಷ್ಟಿಯಿಂದ ಜಿಲ್ಲಾ ಮತ್ತು ತಾಲ್ಲೂಕುವಾರು ಭೌತಿಕ ಗುರಿಯನ್ನು ನಿಗದಿಪಡಿಸತಕ್ಕದ್ದು.

**ಆಯ್ಕೆ ವಿಧಾನ:-**

ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಆಯ್ಕೆ ಸಮಿತಿ ಮೂಲಕ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳನ್ನು ಸಂಬಂಧಪಟ್ಟ ಬ್ಯಾಂಕಿಗೆ ಕಳುಹಿಸಿಕೊಡಲಾಗುತ್ತದೆ. ಬ್ಯಾಂಕಿನಿಂದ ಸಾಲದ ಕ್ಲೆಂಗಳು/ಮಂಜೂರಾತಿ ಪತ್ರ ಬಂದ ನಂತರ ಕೇಂದ್ರ ಕಛೇರಿಗೆ ಸಲ್ಲಿಸಿ. ಸಹಾಯಧನವನ್ನು ಪಡೆದು ಬ್ಯಾಂಕಿಗೆ ಕಳುಹಿಸಲಾಗುತ್ತದೆ.

**ಅರ್ಜಿದಾರರು ಸಲ್ಲಿಸಬೇಕಾದ ದಾಖಲೆಗಳು:**

- ನಿಗದಿತ ನಮೂನೆಯಲ್ಲಿ ಅರ್ಜಿ(ಆನ್‌ಲೈನ್ ಅರ್ಜಿ)
- ಅರ್ಜಿದಾರರ ಇತ್ತೀಚಿನ ಎರಡು ಪಾಸ್ ಪೋರ್ಟ್ ಅಳತೆಯ ಭಾವಚಿತ್ರ
- ಜಾತಿ ಮತ್ತು ಆದಾಯ ಪ್ರಮಾಣ ಪತ್ರ
- ಆಧಾರ್ ಕಾರ್ಡನ ಪ್ರತಿ
- ಪಡಿತರ ಚೀಟಿ/ಮತದಾರರ ಚೀಟಿಯ ಪ್ರತಿ
- ಯೋಜನಾ ವರದಿ
- ಅರ್ಜಿದಾರರು ಅಥವಾ ಕುಟುಂಬದ ಯಾವುದೇ ಸದಸ್ಯರು ಕೇಂದ್ರ/ರಾಜ್ಯ ಸರ್ಕಾರದ ಸೇವೆಯಲ್ಲಿ ಇಲ್ಲದಿರುವ ಬಗ್ಗೆ ರೂ.50/- ಛಾಪಾ ಕಾಗದದಲ್ಲಿನ ದೃಢೀಕರಣ ಪತ್ರ

- ಕೆ.ಎಂ.ಡಿ.ಸಿ. ನಿಗಮದಿಂದ ಈ ಹಿಂದೆ ಯಾವುದೇ ಸಾಲ ಸೌಲಭ್ಯವನ್ನು ಪಡೆದಿಲ್ಲದಿರುವುದರ ಬಗ್ಗೆ ರೂ.50/-ಛಾಪಾ ಕಾಗದದಲ್ಲಿನ ದೃಢೀಕರಣ ಪತ್ರ.

**2). ಅರಿವು (ವಿದ್ಯಾಭ್ಯಾಸ) ಸಾಲ ಯೋಜನೆ (ಪರಿಷ್ಕøತ):-**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳ್ಳುತ್ತಿರುವ ಅರಿವು ವಿದ್ಯಾಭ್ಯಾಸ ಸಾಲ ಯೋಜನೆಯನ್ನು 2020-21ನೇ ಸಾಲಿಗೆ ಅನ್ವಯವಾಗುವಂತೆ ಪರಿಷ್ಕøತ ಸರ್ಕಾರಿ ಆದೇಶ ಹೊರಡಿಸಿದ್ದು ಇದರನ್ವಯ ಹೊಸ (ಫ್ರೇಶ್) ಪ್ರಕರಣಗಳಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾದ ವಿದ್ಯಾರ್ಥಿಗಳ ಹೊರತಾಗಿ ಬೇರೆ ಯಾವ ಕೋರ್ಸುಗಳಿಗೂ ಸಾಲವನ್ನು ನೀಡಲಾಗುವುದಿಲ್ಲ. ರಿನ್ಯೂವಲ್ ಪ್ರಕರಣಗಳಲ್ಲಿ ಈ ಕೆಳಕಂಡಂತೆ ಪರಿಷ್ಕರಿಸಿ ಕಾರ್ಯಗತಗೊಳಿಸಲಾಗುವುದು.

ವಿದ್ಯಾಭ್ಯಾಸ ಕೋರ್ಸ್‍ಗಳು ಮತ್ತು ವಿವರಣೆ ಈ ಹಿಂದೆ ನಿಗಮದಿಂದ ಅರಿವು ಯೋಜನೆಯಡಿಯಲ್ಲಿ ಮಂಜೂರಾತಿ ನೀಡುತ್ತಿದ್ದ ಭೋದನಾ ಶುಲ್ಕದ ವಿವರ 2020-21ನೇ ಸಾಲಿಗೆ ಅನ್ವಯವಾಗುವಂತೆ ಪರಿಷ್ಕøತ ಭೋದನಾ ಶುಲ್ಕ

1 ಸಿ.ಇ.ಟಿ/ನೀಟ್ ಇಂದ ಆಯ್ಕೆಯಾದ ವೈದ್ಯಕೀಯ ಪದವಿ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮಾತ್ರ ಭೋದನಾ ಶುಲ್ಕದ 50% ಗರಿಷ್ಟ ರೂ.3.50ಲಕ್ಷಗಳವರೆಗೆ ಭೋದನಾ ಶುಲ್ಕದ 50% ಗರಿಷ್ಟ ರೂ.02.00ಲಕ್ಷದವರೆಗೆ ಬಿಡುಗಡೆ ಮತ್ತು ರಿನ್ಯೂವಲ್ ಪ್ರಕರಣಕ್ಕೆ ರೂ.02.00 ಲಕ್ಷಗಳು

2 ಸಿ.ಇ.ಟಿ ಇಂದ ಅಂದರೆ ಡೆಂಟಲ್, ಎಂ.ಬಿ.ಎ ಸರ್ಕಾರಿ ಕೋಟಾದಲ್ಲಿ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೋಧನ ಶುಲ್ಕ ಮಾತ್ರ ಬೋದನಾ ಶುಲ್ಕದ ಶೇ 50% ಅಂದರೆ ರೂ.52500/- ರಿಂದ ಗರಿಷ್ಟ ರೂ.3.30 ಲಕ್ಷಗಳವರೆಗೆ ಬೋಧನಾ ಶುಲ್ಕದ ಶೇ. 50% ಗರಿಷ್ಟ ರೂ.30000/-(ರಿನ್ಯೂವಲ್ ಸಹಿತ)

3 ಸಿ.ಇ.ಟಿ ಇಂದ ಅಂದರೆ ಇಂಜಿನಿಯರಿಂಗ್ ಎಂಟೆಕ್., ಎಂ.ಸಿ.ಎ., ಬಿ.ಎಸ್.ಸಿ.(ಎ.ಜಿ) ಆಯುರ್ವೇದ, ಐ.ಎಸ್.ಎಂ.ಹೆಚ್., ಡಿ.ಫಾರ್ಮ, ಬಿ.ಫಾರ್ಮ ಮತ್ತು ಇತರೆ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮಾತ್ರ ಭೋದನಾ ಶುಲ್ಕದ ಗರಿಷ್ಟ ರೂ.75000/-ಗಳವರೆಗೆ ಭೋದನಾ ಶುಲ್ಕದ ಶೇಕಡ 50% ಗರಿಷ್ಟ ರೂ.30,000/-

4 ಇತರೆ ಡಿಗ್ರಿ, ಡಿಪ್ಲೋಮಾ ಮತ್ತು ಐಟಿಐ ಕೋರ್ಸುಗಳಿಗೆ ಸರ್ಕಾರಿ/ಖಾಸಗಿ ಕಾಲೇಜುಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕ ಮಾತ್ರ ಫ್ರೇಶ್ ರೂ.20000/- ಮತ್ತು ರಿನ್ಯೂವಲ್ ರೂ.20000/- ಹೊಸ (ಫ್ರೇಶ್) ಪ್ರಕರಣಗಳಿಗೆ ಬೋಧನಾ ಶುಲ್ಕ ಇರುವುದಿಲ್ಲ.

**ರಿನ್ಯೂವಲ್ ಪ್ರಕರಣಗಳಿಗೆ ಮಾತ್ರ ರೂ.10000/- ಗರಿಷ್ಟ.**

ರಿನ್ಯೂವಲ್ ಸಾಲವನ್ನು ಪರಿಗಣಿಸುವಾಗ ವಿದ್ಯಾರ್ಥಿಯು ಹಿಂದಿನ ವರ್ಷದ/ಹಿಂದಿನ ಸೆಮಿಸ್ಟಾರ್‍ಗಳ ಪರೀಕ್ಷೆಗಳ್ಲಲಿ ಕನಿಷ್ಟ ಶೇ 65 ರಷ್ಟು ಅಂಕಗಳನ್ನು ಪಡೆದು ಎಲ್ಲಾ ವಿಷಯಗಳಲ್ಲೂ ತೇರ್ಗಡೆ ಹೊಂದಿರಬೇಕು. ವಿದ್ಯಾರ್ಥಿಗಳು ಆನ್‍ಲೈನ್‍ನಲ್ಲಿ ರಿನ್ಯೂವಲ್ ಅರ್ಜಿಯನ್ನು ಸಲ್ಲಿಸುವಾಗ ನಿಗಮದಿಂದ ಈ ಹಿಂದ ವರ್ಷಗಳಲ್ಲಿ ಪಡೆದಿರುವ ಒಟ್ಟು ಸಾಲದ ಬಾಕಿಯ ಮೊತ್ತದ ಶೇ.12 ರಷ್ಟನ್ನು ಜಿಲ್ಲಾ ಕಛೇರಿಗಳಲ್ಲಿ ಪಾವತಿಸಿರಬೇಕು. ಉಳಿದಂತೆ ಅರಿವು

ವಿದ್ಯಾಭ್ಯಾಸ ಸಾಲ ಯೋಜನೆಯ ಅನುಷ್ಠಾನದಲ್ಲಿ ಅನುಸರಿಸಲಾಗುತ್ತಿರುವ ಷರತ್ತುಗಳ್ಳಿ ಯಾವುದೇ ಬದಲಾವಣೆಗಳು ಇರುವುದಿಲ್ಲವೆಂದು ಸರ್ಕಾರದ ಆದೇಶ ಸಂಖ್ಯೆ:ಒWಆ 310 ಒಆS 2020, ಬೆಂಗಳೂರು ದಿನಾಂಕ:17.08.2020ರಲ್ಲಿ ಸರ್ಕಾರಿ ಆದೇಶವಿರುತ್ತದೆ. ಇದರಂತೆ ಕ್ರಮ ವಹಿಸಲಾಗುತ್ತಿದೆ. ಮುಂದುವರೆದು ಉಳಿದಂತೆ ಅರಿವು ವಿದ್ಯಾಭ್ಯಾಸ ಸಾಲ ಯೋಜನೆಯ ಅನುಷ್ಠಾನದಲ್ಲಿ ಅನುಸರಿಸಲಾಗುತ್ತಿರುವ ಷರತ್ತುಗಳ್ಳಿ ಯಾವುದೇ ಬದಲಾವಣೆಗಳು ಇರುವುದಿಲ್ಲವೆಂದು ಸ್ಪಷ್ಟಪಡಿಸಿ ಈ ಕೆಳಗಿನಂತೆ ಅರಿವು ಸಾಲ ಬಯಸುವ ವಿದ್ಯಾರ್ಥಿಗಳು ಈ ಕೆಳಗಿನ ನಿಯಮಗಳಂತೆ ಸಾಲ ಪಡೆಯಬಹುದಾಗಿದೆ.

ಮೇಲ್ಕಂಡ ಅರಿವು ಯೋಜನೆ,'ಅರಿವು' (ಅಇಖ) ಯೋಜನೆ, 'ಅರಿವು' (ಒಇಇಖ)ಯೋಜನೆಯಲ್ಲಿ ಪ್ರಥಮಬಾರಿ (ಈಡಿesh) ಸಾಲ ಪಡಯಬಯಸುವ ಅಭ್ಯರ್ಥಿಗಳು ತಿತಿತಿ.ಞmಜಛಿ.ಞಚಿಡಿ.ಟಿಛಿ.iಟ/ಚಿಡಿivu2 ಇದಕ್ಕೆ ಲಾಗ್ ಆನ್ ಮಾಡಿಕೊಳ್ಳಬೇಕು ಮತ್ತು ಅರ್ಜಿಯನ್ನು ಭರ್ತಿ ಮಾಡಬೇಕು. ಅರ್ಜಿಯ ಪ್ರಿಂಟ್‌ಔಟ್‌ನ್ನು ತೆಗೆದುಕೊಂಡು ಕೆಳಕಂಡ ದಾಖಲಾತಿಗಳೊಂದಿಗೆ ಸಂಭಂಧಪಟ್ಟ ನಿಗಮದ ಜಿಲ್ಲಾ ಕಛೇರಿಗೆ ಸಲ್ಲಿಸಬೇಕು.

1. ಅರ್ಜಿದಾರರ / ಅಭ್ಯರ್ಥಿಯ ಪಾಸ್‌ಪೋರ್ಟ್ ಅಳತೆಯ 4 ಭಾವಚಿತ್ರ (Photos)
2. ಜಾತಿ ಮತ್ತು ಆದಾಯ ಪ್ರಮಾಣ ಪತ್ರ ರೂ.6.00 ಲಕ್ಷಗಳ ವರೆಗೆ.
3. ವಿಳಾಸ ದೃಡಿಕರಣ ಪ್ರಮಾಣ ಪತ್ರ: ಮತದಾರರ ಚೀಟಿ (Voters Id)/ ಪಡಿತರಚೀಟಿ (Ration Card)/ಆಧಾರ್ ಚೀಟಿ (Aadhar Card)
4. ಸಿ.ಇ.ಟಿ ಪ್ರವೇಶ ಪ್ರತಿ /ಕಾಲೇಜ್ ಪ್ರವೇಶ ಪ್ರತಿ/ಸಿ.ಎ.ಸಿ ಆದೇಶ
5. ವ್ಯಾಸಂಗ ಪ್ರಮಾಣ ಪತ್ರ (ಇತ್ತೀಚಿನ ಕೋರ್ಸು)
6. ಇಂಡಿಂನಿಟಿ ಬಾಂಡ್ ರೂ.50/- ಛಾಫಾ ಕಾಗದ ಮೇಲೆ ತಂದೆ/ತಾಯಿ/ಪೋಷಕರ ಸಹಿ ಮತ್ತು ಇತ್ತೀಚಿನ 2 ಭಾವ ಚಿತ್ರ.
7. ವಿದ್ಯಾರ್ಥಿಯು ಅಭ್ಯಾಸ ಮಾಡುವ ಕಾಲೇಜಿನ / ಸಂಸ್ಥೆಯ ಬ್ಯಾಂಕ್ ಖಾತೆ ಮತ್ತು ಐಎಫ್‌ಎಸ್‌ಸಿ ಸಂಖ್ಯೆ ಮತ್ತು ಕಾಲೇಜಿನ Email Id ವಿದ್ಯಾರ್ಥಿಯ ದೂರವಾಣಿ ಸಂಖ್ಯೆ (Mobile Number) ಕಡ್ಡಾಯವಾಗಿ ಸಲ್ಲಿಸಬೇಕು.
8. ಶುಲ್ಕ ಪಾವತಿ ಮಾಡಿರುವ ದೃಢೀಕರಣ ಬಿಲ್ಲುಗಳು/ರಶೀದಿಗಳು
9. ನವೀಕರಣ ಪ್ರಸ್ತಾವನೆಗೆ ಹಿಂದಿನ ವರ್ಷದ ಪರೀಕ್ಷೆಯಲ್ಲಿ ಉತ್ತೀರ್ಣವಾದ ಅಂಕಪಟ್ಟಿ ನಕಲು ಅಥವಾ ದೃಡಿಕರಣ ಪತ್ರ.

ಕಳೆದ ಸಾಲಿನಲ್ಲಿ ಸಾಲ ಬಿಡುಗಡೆ ಯಾಗಿರುವ ಅಭ್ಯರ್ಥಿಗಳಿಗೆ ಮಾತ್ರ 2, 3, 4 ಮತ್ತು 5ನೇ ವರ್ಷದ ಸಾಲ ಬಿಡುಗೆಡೆಯ ಪ್ರಸ್ತಾವನೆ, ಅಭ್ಯರ್ಥಿಗಳಿಂದ ಸ್ವಯಂ ಲಿಖಿತ ಪಡೆದ ಅರ್ಜಿ ಮತ್ತು ಅದರ ಜೊತೆ ಕಾಲೇಜಿನ ವ್ಯಾಸಂಗ ಮಾಡುತ್ತಿರುವ ದೃಡೀಕರಣ ಪತ್ರ ಮತ್ತು ಅಂಕಪಟ್ಟಿ ಹಾಗೂ ಈ ಹಿಂದೆ ನಿಗಮದಿಂದ ಬಿಡುಗಡೆ ಮಾಡಿರುವ ಸಾಲದ ಮೊತ್ತಕ್ಕೆ ಶೇಕಡ ಒಟ್ಟು 12 ರಷ್ಟು ಸಾಲ ಮರುಪಾವತಿ ಮಾಡಿದ ರಸೀದಿಯ ಜೊತೆಗೆ ಮೂಲ ಕಡತವನ್ನು ಜಿಲ್ಲಾ ಕಛೇರಿಯಲ್ಲಿ ನೀಡಿ ಕೇಂದ್ರ ಕಛೇರಿಗೆ ನಿಯಮಾನುಸಾರ ಎಕ್ಸೆಲ್ ಪ್ರತಿಯಲ್ಲಿ(Mandate) ನಿಗದಿತ ಅವಧಿಯಲ್ಲಿ ಕಳುಹಿಸಲು ಸೂಚಿಸಿದೆ ಹಾಗೂ ಅಂತಿಮ (Final)ವರ್ಷದ ವಿದ್ಯಾರ್ಥಿಯು ಹಿಂದಿನ ವರ್ಷಗಳ (Including Practical) ಪರೀಕ್ಷೆಯಲ್ಲಿ ಉತ್ತೀರ್ಣವಾದ ಅಂಕಪಟ್ಟಿಯನ್ನು ಸಲ್ಲಿಸಬೇಕು ಅಂತಹ ವಿದ್ಯಾರ್ಥಿಗಳಿಗೆ ಮುಂದಿನ ಸಾಲದ ಕಂತು ಬಿಡುಗಡೆ ಮಾಡಲಾಗುವುದು. ವಿದ್ಯಾರ್ಥಿಯು ಅಭ್ಯಾಸ ಮಾಡುವ ಕಾಲೇಜಿನ / ಸಂಸ್ಥೆಯ ಬ್ಯಾಂಕ್ ಖಾತೆ, ಇಮೇಲ್ ಐಡಿ ಮತ್ತು ಐಎಫ್‌ಎಸ್‌ಸಿ ಸಂಖ್ಯೆಯನ್ನು ಹಾಗೂ ವಿದ್ಯಾರ್ಥಿಯ ದೂರವಾಣಿ ಸಂಖ್ಯೆ (Mobile Number ) ಕಡ್ಡಾಯವಾಗಿ ಸಲ್ಲಿಸಬೇಕು.

**3. ಶ್ರಮಶಕ್ತಿ ಯೋಜನೆ:-**

ರಾಜ್ಯದ ಮತೀಯಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಸಾಂಪ್ರದಾಯಿಕ ಕುಶಲಕರ್ಮಿಗಳು ಹಾಗೂ ವೃತ್ತಿಕುಲಕಸುಬುದಾರರು ಆಧುನಿಕತಂತ್ರಜ್ಞಾನ ಬಳಕೆಯಿಂದಾಗಿ ತಮ್ಮ ಸಾಂಪ್ರದಾಯಿಕ ಮಾರುಕಟ್ಟೆಯನ್ನು ಹಾಗೂ ವೃತ್ತಿಕೌಶಲತೆಗೆ ಅನುಗುಣವಾಗಿ ಅಭಿವೃದ್ಧಿ ಪಡಿಸಿಕೊಳ್ಳಲು ಮತ್ತು ಆದಾಯ ಹೆಚ್ಚಿಸುವ ಚಟುವಟಿಕೆಗಳಿಗೆ ಬಳಸಿಕೊಳ್ಳಲು ಅಗತ್ಯವಿರುವ ಆರ್ಥಿಕ ನೆರವನ್ನು ಕಲ್ಪಿಸುವ ಉದ್ದೇಶದಿಂದ, 'ಶ್ರಮಶಕ್ತಿ'ಯೋಜನೆಯಡಿಯಲ್ಲಿ ಘಟಕ ವೆಚ್ಚವನ್ನು ರೂ.25,000/- ದಿಂದ ರೂ.50,000/-ಕ್ಕೆ ಹೆಚ್ಚಿಸಿ ಸರ್ಕಾರವು ಆದೇಶ ಹೊರಡಿಸಿದೆ. ಘಟಕ ವೆಚ್ಚ ರೂ.50,000/-ಗಳ ಸಾಲದ ಮಂಜೂರಾತಿಯು ಸಾಂಪ್ರದಾಯಿಕ (ಪಾರಂಪರಾಗತ ಕುಶಲಕರ್ಮಿಗಳು/ವೃತ್ತಿ ಕುಲಕಸುಬುದಾರರಿಗೆ ಅನ್ವಯವಾಗುತ್ತದೆ.ಶ್ರಮಶಕ್ತಿ ಯೋಜನೆಯಡಿಯಲ್ಲಿ ಸಾಲ ಮಂಜೂರಾದ ಫಲಾನುಭವಿಗಳ ಬ್ಯಾಂಕ್ ಖಾತೆ ಮತ್ತು ಐಎಫ್ಎಸ್‌ಸಿ ಸಂಖ್ಯೆ ಮತ್ತು ಫಲಾನುಭವಿಗಳ ಬ್ಯಾಂಕ್ ಖಾತೆಯ ವಿವರದ ಮೊದಲನೆ ಪುಟ ಕೇಂದ್ರ ಕಛೇರಿಗೆ ಸಲ್ಲಿಸಬೇಕು, ಸಾಲ ಪಡೆದು ಫಲಾನುಭವಿಯು ಉದ್ದೇಶಿತ ವೃತ್ತಿಗೆ ಮಾತ್ರ ಸಾಲವನ್ನು ಬಳಸಿಕೊಳ್ಳಬೇಕು.

**ಆಯ್ಕೆ ವಿಧಾನ:-**

ವಿಧಾನಸಭಾ ಮತಕ್ಷೇತ್ರದ ಮಾನ್ಯ ಶಾಸಕರ ನೇತೃತ್ವದ ಆಯ್ಕೆ ಸಮಿತಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ.ಇದರಲ್ಲಿ ಶೇ.50ರಷ್ಟು ಸಾಲವನ್ನು ಬ್ಯಾಕ್ಎಂಡ್ ಸಹಾಯಧನವಾಗಿ ಪರಿಗಣಿಸಲಾಗುವುದು.ಈ ಸಾಲಕ್ಕೆ ಸಾಲಿಯಾನ ಶೇ.4ರ ಬಡ್ಡಿದರ ವಿಧಿಸಲಾಗುವುದು.ಮೂರು ವರ್ಷದ ಅವಧಿಯೊಳಗೆ ಸಾಲ ಮರುಪಪಾತಿಸಿದಾಗ ಮಾತ್ರ ಶೇ.50ರಷ್ಟು ಸಹಾಯಧನವನ್ನು ಬ್ಯಾಕ್ಎಂಡ್ ಸಬ್ಸಿಡಿಯಾಗಿ ಸಾಲದ ಖಾತಾ ಪುಸ್ತಕದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.ತಪ್ಪಿದಲ್ಲಿ ಪೂರ್ಣ ಮೊತ್ತವನ್ನು ಸಾಲವನ್ನಾಗಿ ಪರಿಗಣಿಸಲಾಗುವುದು. ಯೋಜನೆ ಉದ್ದೇಶಕ್ಕಾಗಿ ಗುರ್ತಿಸಲಾದ ಸಾಂಪ್ರದಾಯಿಕ (ಪರಂಪರಾಗತ) ಕುಶಲಕರ್ಮಿಗಳು/ ವೃತ್ತಿ ಕಸುಬುಗಳಿಗೆ ಸಾಲಸೌಲಭ್ಯ ನೀಡಲಾಗುವುದು.

**4) ಸಣ್ಣ (ಮೈಕ್ರೋ)ಸಾಲ ಮತ್ತು ಸಹಾಯಧನ ಯೋಜನೆ:-**

ಈ ಯೋಜನೆಯಡಿಯಲ್ಲಿ ನಗರ ಪ್ರದೇಶದಲ್ಲಿ ಮತ್ತು ಗ್ರಾಮಗಳಲ್ಲಿ ವಾಸವಾಗಿರುವ ಮತೀಯ ಅಲ್ಪಸಂಖ್ಯಾತರು ಸಾಮಾನ್ಯವಾಗಿ ಅನಕ್ಷರಸ್ಥರಾಗಿದ್ದು, ಅಂತಹ ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಕುಶಲ ಅಥವಾ ಕುಶಲಯಲ್ಲದ ವ್ಯಕ್ತಿಗಳ ಅಭಿವೃದ್ಧಿಗಾಗಿ ಸಣ್ಣ ಪ್ರಮಾಣದ ವ್ಯಾಪಾರವನ್ನು ಮಾಡಲು ಸಾಲ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ.

ನಿಗಮದಿಂದ ಫಲಾಪೇಕ್ಷಿಗಳು ಸ್ವ-ಸಹಾಯ ಗುಂಪುಗಳನ್ನು ಇತರೆ ಇಲಾಖೆಗಳ ಅಥವಾ ಸರ್ಕಾರೇತರ ಸಂಸ್ಥೆಗಳ ಮೂಲಕ ಸಂಘಟನೆ ಮಾಡಿ ಸ್ವ ಸಹಾಯ ಗುಂಪುಗಳ ಮೂಲಕ ಯೋಜನೆಯನ್ನು ಸಿದ್ಧಪಡಿಸಿ ಅನುಷ್ಠಾನಗೊಳಿಸಬಹುದಾಗಿದೆ. ಸ್ವ-ಸಹಾಯ ಗುಂಪಿನ ಗಾತ್ರ 10 ಜನ ರಿಂದ 20ಜನ ವರೆಗೆಮಾತ್ರ ಮಿತಿಗೊಳಿಸಬೇಕಿರುತ್ತದೆ. ಸ್ವ-ಸಹಾಯ ಗುಂಪು ಕನಿಷ್ಟ ಒಂದು ವರ್ಷದಿಂದ ಕಾರ್ಯ ನಿರ್ವಹಿಸಿತ್ತಿರಬೇಕು ಮತ್ತು ಸ್ವ-ಸಹಾಯ ಸಂಘದ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆದು ಒಂದು ವರ್ಷ ವಾಗಿರಬೇಕು. ಸ್ವ-ಸಹಾಯ ಸಂಘವು ಆರ್ಥಿಕ ಚಟುವಟಿಕೆಗಳಲ್ಲಿ ಲಾಭದಲ್ಲಿರಬೇಕು. ಸ್ವ-ಸಹಾಯ ಗುಂಪಿನ ಸದಸ್ಯರಾಗಿರುವ ಫಲಾನುಭವಿ ಜಮೀನು ಹೊಂದಿದ್ದಲ್ಲಿ ಅಥವಾ ಸರ್ಕಾರಿ/ಸರ್ಕಾರಿ

ಸ್ವಾಮ್ಯದ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿದ್ದಲ್ಲಿ ಅವರಿಗೆ ಸಣ್ಣ ಪ್ರಮಾಣದ ಆರ್ಥಿಕ ಸಾಲ ಯೋಜನೆಯಡಿಯಲ್ಲಿ ಸಾಲ ಮಂಜೂರು ಮಾಡತಕ್ಕದ್ದಲ್ಲ. ಮೈಕ್ರೋ ಕ್ರೆಡಿಟ್ ಹಣಕಾಸು ಯೋಜನೆಯಡಿ ಮತ್ತು ಸ್ವಯಂ ಉದ್ಯೋಗ ಯೋಜನೆಯಡಿ ಶೇಕಡ 50 ರಷ್ಟು ಸಹಾಯಧನ, ಗರಿಷ್ಟ ರೂ.5,000/-ಗಳು ಪ್ರತಿ ಫಲಾನುಭವಿಗೆ ಫಲಾನುಭವಿಯ ಹೆಸರಿನಲ್ಲಿ ಮಂಜೂರು ಮಾಡಿ ಬಿಡುಗಡೆ ಮಾಡಿರುವ ಸಾಲವನ್ನು ಸ್ವ-ಸಹಾಯ ಗುಂಪುಗಳಿಗೆ ಬ್ಯಾಂಕಿನಲ್ಲಿ ತೆರೆದಿರುವ ಖಾತೆಯ ಸಂಖ್ಯೆ ನಮೂದಿಸಿ ಚೆಕ್ಕುಗಳನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಬಹುದಾಗಿದೆ. ಸ್ವ ಸಹಾಯ ಸಂಘಗಳು ಸಾಲವನ್ನು ಫಲಾನುಭವಿಗೆ ಶೇಕಡ 5ರಬಡ್ಡಿ ದರದಲ್ಲಿ ನೀಡಬೇಕು.ಇತರೆ ಮಾಹಿತಿಯನ್ನು ಈ ಪತ್ರದ ಜೊತೆ ಲಗತ್ತಿಸಿರುವ ಸರ್ಕಾರದ ಆದೇಶದ ಪತ್ರದಂತೆ ಅನುಸರಿಸಿ ಯೋಜನೆಯನ್ನು ಕಾರ್ಯಗತಗೊಳಿಸಲು ಸೂಚಿಸಿಲಾಗಿದೆ.

**ಆಯ್ಕೆ ವಿಧಾನ:-**

ವಿಧಾನಸಭಾ ಮತಕ್ಷೇತ್ರದ ಮಾನ್ಯ ಶಾಸಕರ ನೇತೃತ್ವದ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ.

**5. ಮೈಕ್ರೋ ಸಾಲ ಯೋಜನೆ(ವೈಯಕ್ತಿಕ)1(2020-21 ನೇ ಸಾಲಿಗೆ ಮಾತ್ರ)**

ಕೋವಿಡ್-19 ರ ಪಿಡುಗಿನಿಂದಾಗಿ ತೊಂದರೆಗೊಳಗಾದ, ನಿಗಮದ ಯಾವುದೇ ಯೋಜನೆಯಲ್ಲೂ ಇದುವರೆಗೆ ಸಾಲ, ಸಹಾಯಧನ ಯಾವುದನ್ನೂ ಪಡೆಯದ ಕಡುಬಡತನದಲ್ಲಿರುವ ಅಲ್ಪಸಂಖ್ಯಾತ ಸಮುದಾಯz 23,000 ಅಂತ್ಯೋದಯ/ಬಿಪಿಎಲ್ ಕಾರ್ಡ್ ಹೊಂದಿರುವ 25 ರಿಂದ 50 ವಯೋಮಾನದೊಳಗಿನ ಮಹಿಳೆಯರಿಗೆ, ತಳ್ಳುವ ಗಾಡಿಯಲ್ಲಿ ವ್ಯಾಪಾರ, ಬೀದಿ ವ್ಯಾಪಾರ, ಜಾತ್ರೆಗಳಲ್ಲಿ ವ್ಯಾಪಾರ, ಕಿರಾಣಿ ಅಂಗಡಿ,ಅರಿಷಿನ/ ಕುಂಕುಮ/ ಅಗರಬತ್ತಿ/ಕರ್ಪೂರ, ಪಾದಚಾರಿ ಮಾರ್ಗದಲ್ಲಿ, ಟೀ/ಕಾಪಿ ಮಾರಾಟ, ಎಳನೀರು ವ್ಯಾಪಾರ, ಹೂವಿನ ವ್ಯಾಪಾರ, ತರಕಾರಿ ವ್ಯಾಪಾರ, ಹಣ್ಣಿನ ವ್ಯಾಪಾರ, ಇನ್ನಿತರ ಸಣ್ಣ ವ್ಯಾಪಾರ ನಡೆಸಲು ಆರಂಭಿಕ ಬಂಡವಾಳಕ್ಕಾಗಿ ರೂ.10,000/-ಮೊತ್ತದ( ರೂ.8000/- ಸಾಲ +ರೂ.2,000/- ಸಬ್ಸಿಡಿ) ಅಲ್ಪಾವಧಿ ಸಾಲ ಯೋಜನೆ ಇದು.
ಸಾಲ ನೀಡಿಕೆ ವಿಧಾನ:

**ಮೊದಲನೇ ಹಂತ:**

1. ನಿಗಮದ ವೆಬ್ ಸೈಟಿನಲ್ಲಿ(ಞmಜಛಿmiಛಿಡಿo.ಞಚಿಡಿಟಿಚಿಣಚಿಞಚಿ.gov.iಟಿ) ಹೆಸರು,ವಿಳಾಸ,ಆಧಾರ್ ಸಂಖ್ಯೆ,ಮೊಬೈಲ್ ಸಂಖ್ಯೆ ಇತ್ಯಾದಿ ಪ್ರಾಥಮಿಕ ವಿವರಗಳನ್ನು ನೀಡಿ ಅಪ್ ಲೋಡ್ ಮಾಡಿದಾಗ ಅರ್ಜಿದಾರರು ನೀಡಿದ ಮೊಬೈಲ್ ಸಂಖ್ಯೆಗೆ ಓಟಿಪಿ ಸಂಖ್ಯೆಯೊಂದು ಬರುತ್ತದೆ. ಅದನ್ನು ಆನ್ ಲೈನಿನಲ್ಲಿ ದಾಖಲಿಸಿದಾಗ ಅರ್ಜಿಯು ನಿಗಮದ ವೆಬ್ ಸೈಟಿನಲ್ಲಿ ರಿಜಿಸ್ಟರ್ ಆಗುತ್ತದೆ. ಆಗ ಅರ್ಜಿದಾರರ ರಿಜಿಸ್ಟರ್ ಸಂಖ್ಯೆ ಮೊಬೈಲಿಗೂ ರವಾನೆಯಾಗುತ್ತದೆ . ನಂತರ ಪುನ: ರಿಜಿಸ್ಟರ್ ನಂಬರ್ ಮೂಲಕ ವೆಬ್ ಸೈಟಿಗೆ ಲಾಗಿನ್ ಆಗಿ,ಬ್ಯಾಂಕ್ ಖಾತೆ,ಆದಾಯ/ಜಾತಿ ಪ್ರಮಾಣ ಪತ್ರ ಇತ್ಯಾದಿ ದಾಖಲೆಗಳ ಸ್ಕಾನ್ ಕಾಪಿಯನ್ನು ಅಪ್ ಲೋಡ್ ಮಾಡಬೇಕು. ಸಾಲದ ಅರ್ಜಿಗಳನ್ನು ನಿಗದಿತ ಅವಧಿಯೊಳಗೆ ಆನ್ ಲೈನಿನಲ್ಲೇ ಭರ್ತಿ ಮಾಡಿ,ಸಂಬಂಧಪಟ್ಟದಾಖಲಾತಿಗಳೊಂದಿಗೆ ಅಪ್ ಲೋಡ್ ಮಾಡಿದ ನಂತರ ಸ್ವೀಕೃತಗೊಂಡ ನಿಮ್ಮ ಆನ್ ಲೈನ್ ಅರ್ಜಿಯ ಎರಡು ಪ್ರತಿಗಳನ್ನು ಪ್ರಿಂಟ್ ಮಾಡಿ ಇಟ್ಟುಕೊಳ್ಳಬೇಕು.

ಅ). ಅರ್ಜಿಸಲ್ಲಿಸುವಾಗ ನೀಡಬೇಕಾದ ದಾಖಲಾತಿಗಳು

1. ಸರಳ ಅರ್ಜಿ ನಮೂನೆ (ಆನ್ ಲೈನಿನಲ್ಲೆ ನೀಡಲಾಗಿದೆ)
2. ಆಧಾರ್ ಕಾರ್ಡ್ ಪ್ರತಿ
3. ಬಿಪಿಎಲ್ ಕಾರ್ಡ್/ಅಂತ್ಯೋದಯ ಕಾರ್ಡ್ ಪ್ರತಿ
4. ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ (ಹೆಸರು,ಖಾತೆ ಸಂಖ್ಯೆ,ಫೋಟೋ,ಬ್ಯಾಂಕಿನ ವ್ಯವಸ್ಥಾಪಕರ ಸಹಿ ಇರುವ ಪುಟ ಮತ್ತು ಇತ್ತೀಚಿನ ಎರಡು ತಿಂಗಳ ವ್ಯವಹಾರ,ಶಿಲ್ಕು ತೋರಿಸುವ ಪುಟಗಳ ಜೆರಾಕ್ಸ್)
5. ಜಾತಿ/ಆದಾಯ ಪ್ರಮಾಣ ಪತ್ರ
6. ವಿಧವೆಯರು: ಪಿಂಚಣಿ ದಾಖಲೆ ಅಥವಾ ಗಂಡನ ಮರಣ ಪ್ರಮಾಣ ಪತ್ರ
7. ವಿಕಲ ಚೇತನರು: ಅಧಿಕೃತ ಅಂಗವೈಕಲ್ಯ ಪ್ರಮಾಣ ಪತ್ರ.

**ಆ).ಅರ್ಜಿ ಸಲ್ಲಿಕೆ ಮತ್ತು ಮಂಜೂರಾತಿ ಪ್ರಕ್ರಿಯೆ:**

ಆನ್ ಲೈನ್ ಮೂಲಕ ಸಲ್ಲಿಸಲಾದ ಅರ್ಜಿಗಳನ್ನು,ನಿಗಮವು ನಿರ್ಧರಿಸಿದ ಮಾನದಂಡಗಳ ಆಧಾರದಲ್ಲಿ,ಆನ್ ಲೈನಿನಲ್ಲಿಯೇ ಜಿಲ್ಲಾವಾರು, ತಾಲೂಕು ವಾರು ಮತ್ತು ಗ್ರಾಮಪಂಚಾಯತುವಾರಾಗಿ ಹಂಚಿಕೆಯಾದ ಗುರಿಗೆ ಅನುಗುಣವಾಗಿ ಫಲಾನುಭವಿಗಳ ಆಯ್ಕೆ ಮಾಡಲಾಗುವುದು.

**ಎರಡನೇ ಹಂತ:**

1. ಹೀಗೆ ಆಯ್ಕೆಯಾದ ಫಲಾನುಭವಿಗಳಿಗೆ ಮೊಬೈಲ್ ಮೂಲಕ ಆಯ್ಕೆಯಾಗಿರುವ ಬಗ್ಗೆ ಸಂದೇಶ ಕಳುಹಿಸಲಾಗುತ್ತದೆ. ಫಲಾನುಭವಿಗಳು ಈಗಾಗಲೇ ತಮಗೆ ನೀಡಿದ ರಿಜಿಸ್ಟರ್ ನಂಬರ್ ಮೂಲಕ ಲಾಗಿನ್ ಆಗಿ ಆನ್ ಲೈನಿನಿಂದ ಸಾಲದ ದಾಖಲೆ ಪತ್ರಗಳನ್ನು ಮಾತ್ರ ಡೌನ್ ಲೋಡ್ ಮಾಡಿಕೊಂಡು,ಭರ್ತಿ ಮಾಡಿ ಸಹಿ ಹಾಕಿದ ದಾಖಲೆ ಪತ್ರಗಳನ್ನು ಸ್ಕ್ಯಾನ್ ಮಾಡಿ ಮತ್ತೆ ಅಪಲೋಡ್ ಮಾಡಬೇಕು.

2. ಆನ್ ಲೈನಿನಲ್ಲಿ ಅಪಲೋಡ್ ಮಾಡಿದ ನಂತರ, ಸಹಿ ಹಾಕಿಟ್ಟುಕೊಂಡ .ಸಾಲ ಮಂಜೂರಾತಿ ಪತ್ರ ಹಾಗೂ ತಗಾದೆಪತ್ರ,ಹಿಂದೆ ಸಲ್ಲಿಸಿದ ಸಾಲದ ಅರ್ಜಿ ಮತ್ತು ನೀಡಿರುವ ಕೆವೈಸಿ ದಾಖಲೆಗಳ ಪ್ರತಿಗಳೊಂದಿಗೆ, ಆಯಾ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಲ್ಲಿ ಸಲ್ಲಿಸಬೇಕು.

**ಮೂರನೇ ಹಂತ:**

ಸಾಲ ಅನುಮೋದನೆಯ ನಂತರ ಕೇಂದ್ರ ಕಛೇರಿಯಿಂದ ಕೂಡಲೇ ಸಾಲದ ಮೊತ್ತವನ್ನು ನೆಫ್ಟ್ ಮೂಲಕ ಪ್ರತಿಯೋರ್ವ ಆಯ್ಕೆಯಾದ ಫಲಾನುಭವಿಗಳ ಖಾತೆಗೆ ಜಮಾ ಮಾಡಲಾಗುವುದು.

**ಸಾಲ ಬಿಡುಗಡೆಯ ನಂತರ:**

ಮೈಕ್ರೋ ಸಾಲದ ಮೊರೆಟೋರಿಯಂ ಅವಧಿ 2 ತಿಂಗಳು ಮಾತ್ರ. ಸಬ್ಸಿಡಿ ಮೊತ್ತ ರೂ.2000/- ಬಿಟ್ಟು, ರೂ.8000/- ಸಾಲದ ಮೊತ್ತವನ್ನು ಶೇಕಡ 4ರ ಬಡ್ಡಿಯೊಂದಿಗೆ 10 ಸಮಾನ ಮಾಸಿಕ ಕಂತುಗಳಲ್ಲಿ, ರೂ.820/-ರಂತೇ ಮರುಪಾವತಿ ಮಾಡತಕ್ಕದ್ದು.

**6)ಗಂಗಾ ಕಲ್ಯಾಣ ಯೋಜನೆ:-**

ಈ ಯೋಜನೆಯಲ್ಲಿ ಗುರಿಗೆ ಅನುಗುಣವಾಗಿ ಸ್ವೀಕರಿಸುವ ಅರ್ಜಿ ಹಾಗೂ ಅಗತ್ಯ ರೆವಿನ್ಯೂ ದಾಖಲಾತಿಗಳಾದ ನಿಗದಿತ ಅರ್ಜಿ, ಜಾತಿ & ಆದಾಯ ದೃಢೀಕರಣ( ನಗರ ಪ್ರದೇಶಕ್ಕೆ ರೂ. 1,03,000/- ಮತ್ತು ಗ್ರಾಮೀಣ ಪ್ರದೇಶಕ್ಕೆ 81,000/-ರ ಒಳಗೆ) ಆರ್.ಟಿ.ಸಿ, ಮ್ಯೂಟೇಷನ್, ಸಣ್ಣ ಮತ್ತು ಅತಿ ಸಣ್ಣ ರೈತರ ದೃಢೀಕರಣ, ಇ.ಸಿ(13 ವರ್ಷದವರೆಗೆ), ಚೆಕ್ಕುಬಂದಿ, ವಂಶವೃಕ್ಷ, ಜಮೀನಿನಲ್ಲಿ ನೀರಾವರಿ ಸೌಲಭ್ಯವಿಲ್ಲದ ಇರುವ ಬಗ್ಗೆ ವಿ.ಎ ವರದಿ, ಭಾವಚಿತ್ರ, ಜಮೀನು ಕನಿಷ್ಠ 1.20 ಎಕರೆಯಿಂದ 5.00 ಎಕರೆ ಒಳಗೆ ಹೊಂದಿರುವ ಫಲಾಪೇಕ್ಷಿಯಿಂದ ಅರ್ಜಿಪಡೆದ ದಾಖಲಾತಿಗಳನ್ನು ಪರಿಶೀಲಿಸಿ ಸ್ವೀಕರಿಸಿದ ಅರ್ಜಿಗಳನ್ನು ಆಯಾಯ ವಿಧಾನಸಭಾ ಶಾಸಕರೇ ಅಧ್ಯಕ್ಷರಾಗಿದ್ದು ತಾಲ್ಲೂಕು ಆಯ್ಕೆ ಸಮಿತಿಯಿಂದ ಈ ಅರ್ಜಿಗಳನ್ನು ಆಯ್ಕೆ ಮಾಡಿ ಕೊಳವೆ ಬಾವಿ ಕೊರೆಯಲು ಕೇಂದ್ರ ಕಛೇರಿಗೆ ಪ್ರಸ್ತಾವನೆ ಕಳುಹಿಸಿಕೊಡಲಾಗುವುದು. ಪ್ರತಿ ಬಾವಿ ಘಟಕದ ವೆಚ್ಚ 2.00 ಲಕ್ಷಗಳಾಗಿದ್ದು (ವಿದ್ಯೂದ್ದಿಕರಣ ಸೇರಿದಂತೆ) ನಿಗಮವೇ ಕೊಳವೆ ಬಾವಿ ಕೊರೆಯುವಿಕೆ, ಪಂಪು ಮೋಟರ್ ಪೂರೈಕೆ ಮತ್ತು ವಿದ್ಯೂದ್ದೀಕರಣ ವೈ.ಎಂ.ಡಿ. ವೆಚ್ಚವನ್ನು ನಿಗಮವು ಭರಿಸುವುದು. ಈ ಯೋಜನೆಯಡಿಯಲ್ಲಿ ರೂ. 2,00,000/- ಗಳಿಂದ 3,00,000/-ಲಕ್ಷಗಳವರೆಗೆ ಸಹಾಯಧನವಾಗಿರುತ್ತದೆ.

**ಆಯ್ಕೆ ವಿಧಾನ:-**

ವಿಧಾನಸಭಾ ಮತಕ್ಷೇತ್ರದ ಮಾನ್ಯ ಶಾಸಕರ ನೇತೃತ್ವದ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿಗೆ ಕಳುಹಿಸಿ, ಆಡಳಿತಾತ್ಮಕ ಅನುಮೋದನೆ ಪಡೆದು ಟೆಂಡರ್ದಾರರಿಂದ ಕೊಳವೆ ಬಾವಿ ಕೊರೆಯಿಸಿ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.

**7. ಪಶುಸಂಗೋಪನೆ ಯೋಜನೆ, (ಗ್ರಾಮೀಣ ಮಹಿಳೆಯರಿಗೆ ಮಾತ್ರ):-**

ಪಶುಸಂಗೋಪನೆಗೆ ಉತ್ತೇಜನ ನೀಡಿ ಅಲ್ಪಸಂಖ್ಯಾತ ಗ್ರಾಮೀಣ ಮಹಿಳೆಯರಿಗೆ ನಿರಂತರ ಆದಾಯ ಹೊಂದುವಸಲುವಾಗಿ ಹೈನುಗಾರಿಕೆ, ಕೋಳಿಸಾಕಾಣಿಕೆ, ಕುರಿ ಸಾಕಾಣಿಕೆ, ಮುಂತಾದ ಕೃಷಿ ಸಂಬಂಧಿತ ಚಟುವಟಿಕೆಗಳನ್ನು ನಡೆಸಲು ಶೇ.50 ರಷ್ಟು ಸಹಾಯಧನ ಸೇರಿ ರೂ.40,000 ಘಟಕ ವೆಚ್ಚದಲ್ಲಿ ಸಹಾಯ ನೀಡಲಾಗುವುದು.

**ಆಯ್ಕೆ ವಿಧಾನ:-**

ಮಾನ್ಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ.

**8. ಅಲ್ಪಸಂಖ್ಯಾತರ ರೈತರ ಕಲ್ಯಾಣ ಯೋಜನೆ(ಕೃಷಿ ಯಂತ್ರೋಪಕರಣ ಕೊಳ್ಳಲು):-**

ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಆರ್ಥಿಕವಾಗಿ ಹಾಗೂ ಕೃಷಿ ಚಟುವಟಿಕೆಗಲಿಗೆ ಸಂಬಂಧಿಸಿದಂತೆ ಪ್ರೋತ್ಸಾಹಿಸಲು ಉಳುಮೆಯಿಂದ ಕೊಯ್ಲುವರೆಗೆ ಕೃಷಿ ಸಂಬಂಧಿಸಿತ

ಉಪಯುಕ್ತ ವಿವಿಧ ಮಾದರಿಯ ಪರಿಕರಣಗಳಾದ ಸಣ್ಣ ಪವರ್ ಟಿಲ್ಲರ್, ಭೂಮಿ ಸಿದ್ಧತೆ ಉಪಕರಣ, ನಾಟಿ/ಬಿತ್ತನೆ ಉಪಕರಣ, ಅಂತರ ಬೇಸಾಯ ಉಪಕರಣ, ಡೀಸಲ್ ಪಂಪ್‌ಸೆಟ್ ಟ್ರ್ಯಾಕ್ಟರ್/ಟಿಲ್ಲರ್/ಇಂಜಿನ್ ಚಾಲಿತ ಸಸ್ಯ ಸಂರಕ್ಷಣ ಉಪಕರಣಗಳು ಇತ್ಯಾದಿಗಳನ್ನು ರೂ. 1.00 ಲಕ್ಷಗಳ ಘಟಕವೆಚ್ಚದಲ್ಲಿ ಖರೀದಿಸಲು ಇದರಲ್ಲಿ ಶೇ. 50% ರಷ್ಟು ಸಹಾಯಧನದೊಂದಿಗೆ ಸಾಲವನ್ನು ನೀಡಲಾಗುವುದು.

**ಆಯ್ಕೆ ವಿಧಾನ:-**

ಮಾನ್ಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ.

**9. ಆಟೋ ಮೊಬೈಲ್ ಸರ್ವೀಸ್, ಬಿದರಿ ಮತ್ತು ರೇಷ್ಮೆ ಉದ್ಯಮ, ಚನ್ನಪಟ್ಟಣ ಕರಕುಶಲ ಚಟುವಟಿಕೆಗಳಿಗೆ ತರಬೇತಿ ಪ್ರೋತ್ಸಾಹ ಹಾಗೂ ಸಾಲ ಮತ್ತು ಸಹಾಯಧನ ಹಾಗೂ ಮೂಲಭೂತ ಸೌಕರ್ಯ ಯೋಜನೆಗಳಲ್ಲಿ ಸೌಕರ್ಯ ನೀಡುವುದು ಹಾಗೂ ತರಬೇತಿ ಯೋಜನೆ:-**

ಆಟೋ ಮೊಬೈಲ್ ಸರ್ವೀಸ್ ತರಬೇತಿ ಪಡೆದ ನಂತರ ಇವರಿಗೆ ಸ್ವಂತ ಉದ್ಯೋಗ ಕಲ್ಪಿಸಲು ಬ್ಯಾಂಕ್/ಷೆಡ್ಯೂಲ್/ಗ್ರಾಮೀಣ ಬ್ಯಾಂಕ್‌ಗಳಿಂದ ರೂ. 2.00 ಲಕ್ಷಗಳಿಂದ ರೂ. 5.00 ಲಕ್ಷವರೆಗೆ ನೀಡಲಾಗುವುದು ಮತ್ತು ರೇಷ್ಮ ಉದ್ದಿಮೆದಾರರಿಗೆ ಉತ್ತೇಜನ, ತರಬೇತಿಯನ್ನು ನೀಡಲು ಉದ್ದೇಶಿಸಲಾಗಿದೆ. ತರಬೇತಿಯ ನಂತರ ಈ ಕುಶಲಕರ್ಮಿಗಳಿಗೆ ನಿಗಮದಿದಂದ ನೇರವಗಿ ರೂ. 1.00 ಲಕ್ಷಗಳ ಸಾಲವನ್ನು ಮಾಸಿಕ ಶೇ: 3ರ ಬಡ್ಡಿದರದಲ್ಲಿ ನೀಡಲಾಗುವುದು. ಇದರಲ್ಲಿ ಶೇ. 50 ರಷ್ಟು ಸಹಾಯಧನವಾಗಿರುತ್ತದೆ.

**ಆಯ್ಕೆ ವಿಧಾನ:-**

ಮಾನ್ಯ ಮುಖ್ಯ ಕಾರ್ಯ ನಿರ್ವಾಹಣಾ ಅಧಿಕಾರಿಗಳ ನೇತೃತ್ವದಲ್ಲಿ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ.

**10. ಟ್ಯಾಕ್ಸಿ/ಗೂಡ್ಸ್ ವಾಹನ ಖರೀದಿಗಾಗಿ ಸಹಾಯಧನ(ಪರಿಷ್ಕೃತ),:-**

ಈ ಯೋಜನೆಯಲ್ಲಿ ವಿವಿಧ ಬ್ಯಾಂಕುಗಳ ಮೂಲಕ ಟ್ಯಾಕ್ಸಿ/ಗೂಡ್ಸ್ ವಾಹನವನ್ನು ಖರೀದಿಸಲು ನಿಗಮದಿಂದ ಈ ಯೋಜನೆಗೆ ನೀಡಲಾಗುತ್ತಿದ್ದ ಸಹಾಯಧನವನ್ನು ಪ್ರಸ್ತುತ ಕೋವಿಡ್-19 ಸಾಂಕ್ರಾಮಿಕ ರೋಗವು ವ್ಯಾಪಕವಾಗಿ ಹರಡುತ್ತಿರುವುದರಿಂದ ಮತ್ತು ಆಯವ್ಯಯದಲ್ಲಿ ಅನುದಾನ ಕಡತಗೊಂಡಿರುವುದರಿಂದ 2020-21ನೇ ಸಾಲಿಗೆ ಮಾತ್ರ ಅನ್ವಯವಾಗುವಂತೆ ಗರಿಷ್ಠ ರೂ.75000/-ಗಳಿಗೆ ಇಳಿಕೆ ಮಾಡಿ ಕಾರ್ಯಗತಗೊಳಿಸಲು ಅನುಮತಿ ನೀಡಲಾಗಿದೆ. ಉಳಿದಂತೆ ಈ ಯೋಝನೆಯ ಅನುಷ್ಠಾನದಲ್ಲಿ ಅನುಸರಿಸಲಾಗುತ್ತಿರುವ ಷರತ್ತುಗಳಿಗೆ ಯಾವುದೇ ಬದಲಾವಣೆ ಇರುವುದಿಲ್ಲ.

**ಆಯ್ಕೆ ವಿಧಾನ:-**

ಮಾನ್ಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ.

**11. ಮನೆ ಮಳಿಗೆ ಯೋಜನೆ:-**

ಈ ಯೋಜನೆಯನ್ನು ಕೆಳಕಂಡ ಎರಡು ವಿಭಾಗಗಳ ರಾಜ್ಯದ ಅಲ್ಪಸಂಖ್ಯಾತ ವಿಶೇಂಷ ಹಾಗೂ ದುರ್ಬಲ ವರ್ಗದ ಫಲಾನುಭವಿಗಳಿಗೆ ಇವರ ಆರ್ಥಿಕ ಮಟ್ಟವನ್ನು ಉತ್ತಮಗೊಳಿಸಲು ಹಾಗೂ ಈ ವರ್ಗದವರು ಸ್ವಾವಲಂಬಿಗಳಾಗಿ ಬದುಕುವ ನಿಟ್ಟಿನಲ್ಲಿ ಆರ್ಥಿಕ ಸಬಲರನ್ನಾಗಿಸಲು ಸದರಿಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

- ರಾಜ್ಯದಲ್ಲಿ ಕೋಮು ಗಲಭೆ ಮತ್ತು ಕೋಮು ಹಿಂಸಾಚಾರದ ಸಂಬಂಧಗಳಲ್ಲಿ ಹಾಗೂ ಪ್ರಕೃತಿ ವಿಕೋಪಗಳಿಂದ ವ್ಯಾಪಾರ ಕೇಂದ್ರಗಳು ಹಾಗೂ ವಾಸದ ಮನೆಗಳು ನಾಶ ಅಥವಾ ಹಾನಿಗೊಳಗಾಗಿ ಜೀವನೋಪಾಯವನ್ನು ಸಾಧಿಸಲು ಸಾಧ್ಯವಾಗದ ಅಲ್ಪಸಂಖ್ಯಾತ ಸಮುದಾಯದ ಫಲಾನುಭವಿಗಳಿಗೆ ಹೊಸದಾಗಿ ವ್ಯಾಪಾರ/ಉದ್ಯಮ ಪ್ರಾರಂಭಿಸಲು ಸಾಲ ಸೌಲಭ್ಯವನ್ನು ನೀಡಲಾಗುವುದು.

- ಸನ್ನಡತೆ ಆಧಾರದ ಮೇಲೆ ಕಾರಾಗೃಹ ವಾಸದಿಂದ ಬಿಡುಗಡೆಯಾದ ಖೈದಿಗಳಿಗೆ, ಭಯೋತ್ಪಾದಕ ವಿರೋಧಿ ಚಟುವಟಿಕೆ, ಗೂಂಡಾ ಕಾಯಿದೆಯಡಿ ಬಂಧಿತರಾಗಿ ಈ ಪ್ರಕರಣಗಳು ಸಾಬೀತಾಗದೇ ನ್ಯಾಯಾಲಯದಿಂದ ಬಿಡುಗಡೆಯಾದ ನಿರಪರಾಧಿಗಳಿಗೆ ಹಾಗೂ ವಿವಿಧ ಸುರಕ್ಷತೆ ಕಾಯಿದೆಯಡಿ ಬಂಧಿತರಾಗಿ ಹಲವಾರು ವರ್ಷಗಳ ನಂತರ ನ್ಯಾಯಾಲಯದಿಂದ ಬಿಡುಗಡೆಯಾದ ನಿರಪರಾಧಿಗಳು ಇವರಿಗೆ ಜೀವನೋಪಾಯವನ್ನು ಕಲ್ಪಿಸಲು ಇಂತಹ ಅಲ್ಪಸಂಖ್ಯಾತರ ವರ್ಗದರವನು ಗುರುತಿಸಿ ಸಾಲ ಸೌಲಭ್ಯವನ್ನು ನೀಡಿ ಇವರ ಜೀವನವನ್ನು ಉತ್ತಮಗೊಳಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಲ್ಲಿ ಸಾಲಸೌಲಭ್ಯ ಪಡೆಯಲು ಸಂಬಂಧಪಟ್ಟ ಪ್ರಾಧಿಕಾರದಿಂದ ವರದಿಯನ್ನು ಪಡೆದು ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

**ಸಾಲ ಸೌಲಭ್ಯದ ವಿವರ:**

ಮೇಲ್ಕಂಡಂತೆ 2 ವರ್ಗಗಳ ರಾಜ್ಯದಲ್ಲಿನ ವಿಶೇಷ/ದುರ್ಬಲ ವರ್ಗದ ಫಲಾನುಭವಿಗಳಿಗೆ ಗರಿಷ್ಟ 5.00 ಲಕ್ಷಗಳ ಘಟಕ ವೆಚ್ಚಕ್ಕೆ ಶೇ.50 ರಷ್ಟು ಸಹಾಯಧನ ಮತ್ತು ಶೇ.3ರ ಬಡ್ಡಿ ದರದಲ್ಲಿ ಶೇ.50ರಷ್ಟು ಸಾಲವನ್ನು ನೀಡಲಾಗುವುದು.

**ಆಯ್ಕೆ ವಿಧಾನ:-**

ಮಾನ್ಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯವರ ನೇತೃತ್ವದಲ್ಲಿ ಆಯ್ಕೆ ಸಮಿತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತದೆ. ಆಯ್ಕೆ ಸಮಿತಿ ಅನುಮೋದಿತ ಪ್ರಸ್ತಾವನೆಗಳಿಗೆ ಸಾಲ ಮಂಜೂರು ಮಾಡಲಾಗುತ್ತದೆ.

**12. ಗೃಹ ನಿರ್ಮಾಣ – ಮಾರ್ಜಿನ್ ಹಣ ಸಾಲ ಯೋಜನೆ :-**

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಎಂಡಬ್ಲ್ಯೂಡಿ 69 ಎಂಡಿಸಿ 2014, ಬೆಂಗಳೂರು ದಿನಾಂಕ:18.07.2016ರನ್ವಯ ದಿನಾಂಕ:12.12.2013ರ ಸರ್ಕಾರ ಆದೇಶ ಸಂಖ್ಯೆ:ಅಸಂಕಿ 397 ಎಂಡಿಎಸ್ 2013ಅನ್ನು ಹಿಂಪಡೆದು ಸರ್ಕಾರಿ ಸ್ವಾಮ್ಯದ ಗೃಹ ನಿರ್ಮಾಣ ಸಂಸ್ಥೆಗಳು ಅಂದರೆ ರಾಜೀವ್ ಗಾಂಧಿ ಗೃಹ ನಿರ್ಮಾಣ ನಿಗಮ, ಕರ್ನಾಟಕ ಗೃಹ ನಿರ್ಮಾಣ ಮಂಡಳಿ, ಕೊಳಚೆ ನಿರ್ಮೂಲನ ಂಂಂಡಳೀ ಹಾಗೂ ಇತರೇ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಮೂಲಕ ವಿವಿಧ ಗೃಹ ನಿರ್ಮಾಣ ಯೋಜನೆಗಳಡಿಯಲ್ಲಿ ಆಯ್ಕೆಯಾಗುವ ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತ ಫಲಾನುಭವಿಗಳಿಗೆ ಗೃಹ ನಿರ್ಮಾಣ ಮಾಡಲು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಮತಿಯಿಂದ ಗೃಹ ನಿರ್ಮಾಣ ಮಾರ್ಜಿನ ಹಣ ಸಾಲ ಯೋಜನೆ ಅಡಿಯಲ್ಲಿ ಗೃಹ ನಿರ್ಮಾಣದ ಘಟಕ ವೆಚ್ಚದನ್ವಯ ನಿಗದಿಪಡಿಸಲಾಗುವ ಫಲಾನುಭವಿಯ ವಂತಿಕೆಯನ್ನು(Beneficiary’s Contribution) ಗರಿಷ್ಠ 1.00 ಲಕ್ಷದವರೆಗೆ ಮಾರ್ಜಿನ್ ಹಣ ಸಾಲವನ್ನಾಗಿ ಪರಿವರ್ತನೆ ಮಾಡಲಾಗುವುದು. ಈ ಸಾಲಕ್ಕೆ ಶೇ.4ರ ಬಡ್ಡಿ ದರದಲ್ಲಿ ಮಾರ್ಗಸೂಚಿಗಳನ್ವಯ ನೀಡಲಾಗುವುದು.

**ಷರತ್ತುಗಳು:**

1) ರಾಜ್ಯದಲ್ಲಿನ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಆಯ್ಕೆಯಾದ ಮತೀಯ ಅಲ್ಪಸಂಖ್ಯಾತರ ಫಲಾನುಭವಿಗಳ ಪಟ್ಟಿಯನ್ನು ಆಯಾ ಸಂಸ್ಥೆಗಳೀಂದ ಪಡೆದು ಆದೇಶದಲ್ಲಿ ಸೂಚಿಸಿರುವಂತೆ ವಂತಿಕೆಯನ್ನು ನೀಡಲು ಕ್ರಮವಹಿಸತಕ್ಕದ್ದು.
2) ಈ ಫಲಾನುಭವಿಗಳು ಆಯ್ಕೆಯಾಗುವ ಸಂದರ್ಭದಲ್ಲಿ ಆಯಾ ಸಂಸ್ಥೆಗಳ ಗೃಹ ನಿರ್ಮಾಣಕ್ಕಾಗಿ ರೂಪಸಲಾಗಿರುವ ಮಾರ್ಗಸೂಚಿಗಳನ್ವಯ ಹಾಗೂ ಷರತ್ತುಗಳನ್ವಯ ಆಯ್ಕೆಯಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು.
3) ಫಲಾನುಭವಿಗಳು ನಿಯಮಾನುಸಾರ ಸಂಬಂಧಪಟ್ಟ ಸಂಸ್ಥೆಗಳಿಗೆ ಅಗತ್ಯ ದಾಖಲೆಗಳನ್ನು ಒದಗಿಸಿರುವ ಬಗ್ಗೆಯೂ ಸಹ ಖಚಿತಪಡಿಸಿಕೊಳ್ಳತಕ್ಕದ್ದು.
4) ಈ ಉದ್ದೇಶಕ್ಕಾಗಿ ನೀಡಲಾಗುವ ವಂತಿಕೆಯನ್ನು ಫಲಾನುಭವಿಗಳನ್ನು ಆಯ್ಕೆ ಮಾಡಿರುವ ಇಲಾಖೆಗಳಿಗೆ/ನಿಗಮ/ಮಂಡಳಿಯ ಸಂಸ್ಥೆಗಳೀಗೆ ನೇರವಾಗಿ ಜಮಾ ಮಾಡತಕ್ಕದ್ದು
5) ಮಾರ್ಜಿನ್ ಹಣ ಸಾಲ ಯೋಜನೆಯಲ್ಲಿ ಸಾಲವನ್ನು ಮರುಪಾವತಿಸಲು ನಿಗಮದಿಂದ ಹೊರಡಿಸಲಾಗಿರುವ ಮಾರ್ಗಸೂಚಿಗಳ ಮಾದರಿಯಲ್ಲಿಯೇ ಈ ಯೋಜನೆಯಲ್ಲಿಯೂ ಸಹ ಸುಲಭ ಮಾರ್ಗಸೂಚಿಗಳನ್ನು ರಚಿಸಿ ಜಾರಿಗೊಳಿಸಲು ಕ್ರಮವಹಿಸಲಾಗಿದೆ.

## (ಆ) ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮ (ಎನ್.ಎಂ.ಡಿ.ಎಫ್.ಸಿ), ಯೋಜನೆಗಳು:

ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಹಣಕಾಸು ನಿಗಮವು (ದೆಹಲಿ) ದಿನಾಂ:30-09-1994ರಲ್ಲಿ ಸ್ಥಾಪಿತಗೊಂಡಿದ್ದು, ಮತೀಯ ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದ ಕಡುಬಡವರ ಆರ್ಥಿಕಾಭಿವೃದ್ಧಿಯನ್ನು ಗುರಿಯಾಗಿರಿಕೊಂಡು ಮತ್ತು ಅವರನ್ನು ಸ್ವಾವಲಂಬಿತಗಳಾನ್ನಾಗಿ ಮಾಡಲು ರಾಜ್ಯ ವಿತರಣಾ ಸಂಸ್ಥೆಗಳ (ಎಸ್.ಸಿ.ಎ)ಮೂಲಕ ವಿವಿಧ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಕರ್ನಾಟಕದಲ್ಲಿ ಎನ್.ಎಂ.ಡಿ.ಎಫ್.ಸಿ.ಯ ರಾಜ್ಯ ವಿತರಣಾ ಸಂಸ್ಥೆಯಾಗಿರುತ್ತದೆ. ಎನ್.ಎಂ.ಡಿ.ಎಫ್.ಸಿ. ಯ ಕೆಳಕಂಡ ಯೋಜನೆಗಳಡಿಯಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ಅರ್ಹ ಫಲಾನುಭವಿಗಳಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ಸೌಲಭ್ಯವನ್ನು ನೀಡುತ್ತಿದೆ.

### ಅ. ಅವಧಿ ಸಾಲ ಯೋಜನೆ:-

ಸದರಿ ಯೋಜನೆ ಏಕವ್ಯಕಿಪರ ಯೋಜನೆಯಾಗಿದ್ದು. ಕ್ರೆಡಿಟ್ ಲೈನ್-1ರ ನಿಯಮಾವಳಿಯನ್ವಯ ಪ್ರತಿ ಫಲಾನುಭವಿಗೆ ವ್ಯಾಪಾರ/ಆರ್ಥಿಕ ಚಟುವಟಿಕೆಗಳಿಗಾಗಿ ರೂ. 50,000-00 ದಿಂದ ರೂ. 20.00 ಲಕ್ಷದವರೆಗಿನ ಸಾಲಕ್ಕೆ ಶೇ. 6ರ ಬಡ್ಡಿ ದರದಲ್ಲಿ ಸಾಲಸೌಲಭ್ಯ ನೀಡಲಾಗುತ್ತದೆ. ಹಾಗೆಯೇ, ಕ್ರೆಡಿಟ್ ಲೈನ್-2ರ ನಿಯಮಾವಳಿಯನ್ವಯ ಪ್ರತಿ ಫಲಾನುಭವಿಗೆ ರೂ.30.00 ಲಕ್ಷದವರೆಗೆ, ಪುರುಷರಿಗೆ ಶೇ.8ರ ಬಡ್ಡಿ ದರದಲ್ಲಿ ಮತ್ತು ಮಹಿಳೆಯರಿಗೆ ಶೇ.6ರ ಬಡಿ ದರದಲ್ಲಿ ಸಾಲಸೌಲಭ್ಯ ನೀಡಲಾಗುತ್ತದೆ. ಒಟ್ಟು ಸಾಲದಲ್ಲಿ ಎನ್.ಎಂ.ಡಿ.ಎಫ್.ಸಿ.ಯ ಪಾಲು ಶೇ. 90, ಕೆ.ಎಂ.ಡಿ.ಸಿ. ಪಾಲು ಶೇ.5 ಆಗಿದ್ದು, ಇನ್ನುಳಿದ ಶೇ.5ರಷ್ಟು ವಂತಿಕೆಯನ್ನು ಫಲಾನುಭವಿಯು ಭರಿಸಬೇಕಾಗುತ್ತದೆ. ಫಲಾನುಭವಿಯು ಸಾರಿಗೆ ಕ್ಷೇತ್ರದಲ್ಲಿ ಸಾರಿಗೆ ವಾಹನವನ್ನು ಕೊಳ್ಳಲು ಸಹ ನಿಗಮವು ಸಾಲಸೌಲಭ್ಯವನ್ನು ನೀಡುತ್ತದೆ. ಫಲಾನುಭವಿಯು ಸಾಲವನ್ನು 36/60 ಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗುತ್ತದೆ.

### ಆ. ವಿದ್ಯಾಭ್ಯಾಸ ಸಾಲ ಯೋಜನೆ:-

ಸದರಿ ಯೋಜನೆಯಡಿ ಕ್ರೆಡಿಟ್ ಲೈನ್-1ರ ನಿಯಮಾವಳಿಯನ್ವಯ ಅಲ್ಪಸಂಖ್ಯಾತ ಸಮುದಾಯಗಳ ವಿದ್ಯಾರ್ಥಿಗಳಿಗೆ 05 ವರ್ಷಗಳ ವೃತ್ತಿಪರ ಮತ್ತು ತಾಂತ್ರಿಕ ವ್ಯಾಸಂಗಕ್ಕಾಗಿ ಸಾಲಿಕ್ಕೆ ಶೇ.3ರ ಬಡ್ಡಿ ದರದಲ್ಲಿ ರೂ. 15.00 ಲಕ್ಷಗಳವರೆಗೆ (ವಿದೇಶ ವ್ಯಾಸಂಗಕ್ಕಾಗಿ ರೂ. 20.00 ಲಕ್ಷಗಳವರೆಗೆ) ಮತ್ತು ಕ್ರೆಡಿಟ್ ಲೈನ್-2ರ ನಿಯಮಾವಳಿಯನ್ವಯ ಪುರುಷ ವಿದ್ಯಾರ್ಥಿಗೆ ಸಾಲಿಯಾನ ಶೇ.8ರ ಬಡ್ಡಿ ದರದಲ್ಲಿ ಮತ್ತು ಮಹಿಳಾ ವಿದ್ಯಾರ್ಥಿಗೆ ಶೇ. 5ರ ಬಡ್ಡಿ ದರದಲ್ಲಿ ರೂ.20.00 ಲಕ್ಷಗಳವರೆಗೆ (ವಿದೇಶ ವ್ಯಾಸಂಗಕ್ಕಾಗಿ ರೂ. 30.00 ಲಕ್ಷಗಳವರೆಗೆ) ಸಾಲ ಸೌಲಭ್ಯ ನೀಡಲಾಗುತ್ತದೆ.

ಎನ್.ಎಂ.ಡಿ.ಎಫ್.ಸಿ.ಯು ಅಲ್ಪಸಂಖ್ಯಾತ ಸಮುದಾಯಗಳ ಅರ್ಹ ವಿದ್ಯಾರ್ಥಿಗಳಿಗೆ ವೃತ್ತಿ ಆಧಾರಿತ ಶಿಕ್ಷಣ ಪಡೆಯಲು ಅನುಕೂಲವಾಗುವಂತೆ ಸಾಲಸೌಲಭ್ಯ ನೀಡುವ ಉದ್ದೇಶವನ್ನು ಹೊಂದಿರುತ್ತದೆ. ವಿದ್ಯಾರ್ಥಿಗಳು ಪಡೆದ ಸಾಲವನ್ನು ಅವರ ವ್ಯಾಸಂಗ ಪೂರ್ಣಗೊಂಡ ನಂತರ 05 ವರ್ಷಗಳ ಅವಧಿಯಲ್ಲಿ ಮರುಪಾವತಿ ಮಾಡಬೇಕಾಗುತ್ತದೆ.

ನಿಗಮವು ಮಂಜೂರು ಮಾಡುವ ಅವಧಿ ಮತ್ತು ವಿದ್ಯಾಭ್ಯಾಸü ಸಾಲಕ್ಕಾಗಿ ಫಲಾನುಭವಿಯು ಮಂಜೂರಾಗುವ ಮೊತ್ತಕ್ಕೆ ಅನುಗುಣವಾಗಿ ಈ ಕೆಳಗೆ ತಿಳಿಸಿರುವಂತೆ ಸರ್ಕಾರಿ/ಬ್ಯಾಂಕ್ ಉದ್ಯೋಗಿಗಳು/ಆದಾಯ ತೆರಿಗೆ ಪಾವತಿದಾರರು ಅಥವಾ ಸ್ಥಿರಾಸ್ತಿಯ ಅಡಮಾನ ಮಾಡಬೇಕಾಗಿರುತ್ತದೆ.

(1) ರೂ.1.00 ಲಕ್ಷದವರೆಗೆ -- ಸ್ವಂತ ಜಾಮೀನು (Self-Guarantee) ಮತ್ತು (Post-dated Cheque)

(2) ರೂ.1.00 ಲಕ್ಷದಿಂದ ರೂ.5.00ಲಕ್ಷಗಳವರೆಗೆ -- ಓರ್ವ ಸರ್ಕಾರಿ/ಬ್ಯಾಂಕ್/ಆದಾಯ ತೆರಿಗೆ ಪಾವತಿದಾರ ಹಾಗೂ ಸಾರ್ವಜನಿಕ ಪ್ರತಿನಿಧಿಯ ಜಾಮೀನು ಮತ್ತು (Post-dated Cheque)

(3) ರೂ.5.00 ಲಕ್ಷಗಳಿಂದ ಹೆಚ್ಚಿನ ಸಾಲ -- ಇಬ್ಬರು ಸರ್ಕಾರಿ/ಬ್ಯಾಂಕ್/ಆದಾಯ ತೆರಿಗೆ ಪಾವತಿದಾರ ಹಾಗೂ ಸಾರ್ವಜನಿಕ ಪ್ರತಿನಿಧಿಯ ಜಾಮೀನು ಅಥವಾ ಸ್ಥಿರಾಸ್ತಿಯ ಅಡಮಾನ ಮತ್ತು (Post-dated Cheque)

**2. ಮೇಲ್ಕಂಡ ಯೋಜನೆಗಳಡಿ ಸಾಲಸೌಲಭ್ಯ ಪಡೆಯಲು ಇರಬೇಕಾದ ಅರ್ಹತೆಗಳು ಮತ್ತು ಮಾನದಂಡ ಈ ಕೆಳಕಂಡಂತಿವೆ:**

1. ಫಲಾನುಭವಿಯು ಮತೀಯ ಅಲ್ಪಸಂಖ್ಯಾತರು ಅಂದರೆ ಮುಸ್ಲಿಂ, ಕ್ರೈಸ್ತರು, ಜೈನರು, ಬೌದ್ಧರು, ಸಿಖ್ಖರು, ಪಾರ್ಸಿ ವರ್ಗಕ್ಕೆ ಸೇರಿದವರಾಗಬೇಕು.
2. ಅರ್ಜಿದಾರರು ಕರ್ನಾಟಕ ರಾಜ್ಯದಲ್ಲಿ ಕನಿಷ್ಠ 10 ವರ್ಷ ವಾಸವಾಗಿರಬೇಕು.
3. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ಗ್ರಾಮಾಂತರ ಪ್ರದೇಶದವರಿಗೆ ರೂ.81,000/-, ಮತ್ತು ನಗರ ಪ್ರದೇಶದವರಿಗೆ ರೂ.1,03,000/- ಮೀರಬಾರದು.
4. ಕುಟುಂಬದ ವಾರ್ಷಿಕ ಆದಾಯ ರೂ. 6,00,000/- ಮೀರಬಾರದು, ನಿಗಮದ ಎನ್.ಎಂ.ಡಿ.ಎಫ್.ಸಿ ಯೋಜನೆಯಡಿಯಲ್ಲಿ Credit Line-1 –ಕುಟುಂಬದ ಆದಾಯ ಮಿತಿ ನಗರ ಪ್ರದೇಶದ ಅರ್ಜಿದಾರರಿಗೆ ರೂ.120000/- ಹಾಗೂ ಗ್ರಾಮೀಣ ಪ್ರದೇಶದ ಅರ್ಜಿದಾರರಿಗೆ ರೂ.98000/-ಗಳು Credit Line-2 – ಕುಟುಂಬದ ಆದಾಯ ಮಿತಿ ನಗರ ಮತ್ತು ಗ್ರಾಮೀಣ ಅರ್ಜಿದಾರರಿಗೆ ಕುಟುಂಬದ ವಾರ್ಷಿಕ ಆದಾಯ ರೂ.600000/-
5. 3 ಫೋಟೋ.
6. ಅರ್ಜಿದಾರರ ವಯಸ್ಸು ಕನಿಷ್ಠ 18 ವರ್ಷಗಳು ಮತ್ತು ಗರಿಷ್ಠ 55 ವರ್ಷಗಳು. (ಅರಿವು ಯೋಜನೆಯಲ್ಲಿ ಈ ಷರತ್ತು ಅನುವಹಿಸುವುದಿಲ್ಲ.) ಮೀರಬಾರದು.
7. ಶೇ.33ರಷ್ಟು ಮಹಿಳೆಯರಿಗೆ ಮೀಸಲಾತಿ ಇರುತ್ತದೆ. ಶೇ. 05ರಷ್ಟು ಅಂಗವಿಕಲರಿಗೆ ಮೀಸಲಾತಿ ಇರುತ್ತದೆ.
8. ಅರ್ಜಿದಾರರು ತಮ್ಮ ವಿಳಾಸದ ದೃಢೀಕರಣಕ್ಕಾಗಿ ಪಡಿತರ ಚೀಟಿ, ಆಧಾರ್ ಚೀಟಿ, ಗುರುತಿನ ಚೀಟಿ ಆಧಾರ್(UID) ಪ್ರತಿಯನ್ನು ಸಲ್ಲಿಸಬೇಕು ಮತ್ತು ಅದನ್ನು ಅವರ ಬ್ಯಾಂಕ್‌ನ ಉಳಿತಾಯ ಖಾತೆಗೆ ಹೊಂದಾಣಿಕೆ (ಲಿಂಕ್) ಮಾಡಬೇಕು.
9. ಈ ಹಿಂದೆ ನಿಗಮದ ಸೌಲಭ್ಯವನ್ನು ಪಡೆದವರು ಮತ್ತೆ ಸೌಲಭ್ಯವನ್ನು ಪಡೆಯಲು ಅರ್ಹರಿರುವುದಿಲ್ಲ.

**2. 4(1)(ಬಿ)(ii) ರನ್ವಯ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯಲ್ಲಿ ಅಧಿಕಾರಿಗಳ/ನೌಕರರ ಕರ್ತವ್ಯಗಳು ಹಾಗೂ ಹೊಣೆಗಾರಿಕೆಗಳು- ಅನುಬಂಧ-ಅ ರಲ್ಲಿ ಮಂಡಿಸಿದೆ.**

ನಿಗಮದ ಜಿಲ್ಲಾ ಕಛೇರಿಯ ಅಧಿಕಾರಿಗಳ/ನೌಕರರ ಕರ್ತವ್ಯಗಳು ಹಾಗೂ ಹೊಣೆಗಾರಿಕೆಗಳು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ಮಟ್ಟದ ಅಧಿಕಾರಿ/ಸಿಬ್ಬಂದಿ ಸಾಮಥ್ರ್ಯದ ಚಾರ್ಟ್ ವಿವರ ಈ ಕೆಳಕಂಡಂತಿದೆ.

**1. ಜಿಲ್ಲಾ ಮಟ್ಟದ ಜಿಲ್ಲಾ ವ್ಯವಸ್ಥಾಪಕರ ಅಧಿಕಾರ ಮತ್ತು ಕರ್ತವ್ಯಗಳು:-**

ಸಂಖ್ಯೆ:ಕಅಅನಿ/ಆಡಳಿತ/2016-17/ ದಿನಾಂಕ:14-12-2016.

**<u>ಅಧಿಸೂಚನೆ</u>**

ವಿಷಯ: ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ವ್ಯವಸ್ಥಾಪಕರ ಅಧಿಕಾರ ಮತ್ತು ಕರ್ತವ್ಯಗಳ ವಿವರ.

------

**ಜಿಲ್ಲಾ ಮಟ್ಟದ ಜಿಲ್ಲಾ ವ್ಯವಸ್ಥಾಪಕರ ಅಧಿಕಾರ ಮತ್ತು ಕರ್ತವ್ಯಗಳು:**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ 32 ಕಛೇರಿಗಳು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಎಲ್ಲಾ 30 ಜಿಲ್ಲೆಗಳಲ್ಲಿ ನಿಗಮದ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲಾ ವ್ಯವಸ್ಥಾಪಕರು ಆಯಾ ಜಿಲ್ಲಾ ಕಛೇರಿಯ ಪೂರ್ಣ ಆಡಳಿತ ನಿರ್ವಹಣೆ, ಯೋಜನೆಯ ಅನುಷ್ಠಾನ ಮತ್ತು ಗುರಿ ಸಾಧನೆ, ಬ್ಯಾಂಕ್/ಹಣಕಾಸು ಸಂಸ್ಥೆಗಳೊಡನೆ ವ್ಯವಹಾರ, ಪ್ರಕಟಣೆ ನೀಡುವುದು, ಅರ್ಜಿ ಪಡೆದು ಜಿಲ್ಲಾ ಸಮಿತಿ ಅನುಮೋದನೆ ಪಡೆದು ಗುರಿಯನ್ವಯ ಸಾಲ ಸೌಲಭ್ಯಗಳನ್ನು ವಿತರಿಸಿ, ಲೆಕ್ಕ ಪತ್ರ, ಇತ್ಯಾದಿ ಕಾರ್ಯಗಳನ್ನು ನಿರ್ವಹಣೆ ಮಾಡುವ ಅಧಿಕಾರ ನೀಡಲಾಗಿದೆ.

**ಜಿಲ್ಲಾ ವ್ಯವಸ್ಥಾಪಕರುಗಳ ಕರ್ತವ್ಯಗಳು:**

1. ಜಿಲ್ಲಾ ಕಛೇರಿಯ ಸಂಪೂರ್ಣ ಆಡಳಿತ ನಿರ್ವಹಣೆ, ಗುರಿ ಅನ್ವಯ ಎಲ್ಲಾ ಯೋಜನೆಯ ಅನುಷ್ಠಾನ ಮತ್ತು ಗುರಿ ಸಾಧನೆಯ ಜವಾಬ್ದಾರಿ. ಮತ್ತು ಸಾಲ ವಸೂಲಾತಿಗೆ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.
2. ಅಗತ್ಯ ಸಭೆಗಳಿಗೆ ಹಾಜರಾಗುವುದು, ಯೋಜನೆಗಳ ಬಗ್ಗೆ ಜನ ಪ್ರತಿನಿಧಿಗಳಿಗೆ ಮಾಹಿತಿ ನೀಡುವುದು.
3. ವಿವಿಧ ಇಲಾಖೆಗಳು, ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳೊಂದಿಗೆ ಯೋಜನೆಯ ಅನುಷ್ಠಾನಕ್ಕಾಗಿ ಸಮನ್ವಯಾಧಿಕಾರಿಯಾಗಿ ಕೆಲಸ ನಿರ್ವಹಿಸುವುದು.
4. ಸರ್ಕಾರದ ವಿವಿಧ ಆದೇಶಗಳಲ್ಲಿ ಮತ್ತು ನಿಗಮದ ಆದೇಶ, ಪತ್ರ ಮತ್ತು ಸುತ್ತೋಲೆಗಳಲ್ಲಿ ವಹಿಸಿದ ಜವಾಬ್ದಾರಿಗಳನ್ನು ನಿರ್ವಹಿಸುವುದು.
5. ತಿಂಗಳಿಗೆ ಕನಿಷ್ಠ 10 ದಿನಗಳ ಪ್ರವಾಸ ಮಾಡಿ, ಸಾಲ ವಸೂಲಾತಿ ಮತ್ತು ಘಟಕ ತಪಾಸಣೆ ಮಾಡುವುದು. ಸಂಧರ್ಭಾನುಸಾರ ವಿವಿಧ ತಾಲ್ಲೂಕು ಹೋಬಳಿ ಕೇಂದ್ರಗಳಲ್ಲಿ ವಾಸ್ತವ್ಯ ಮಾಡುವುದು.

6. ನಿಗಮದ ವಿವಿಧ ಯೋಜನೆಗಳ ಅನುಷ್ಠಾನದೊಂದಿಗೆ ಸಂಬಂಧಿಸಿದ ವಿವಿಧ ರಿಜಿಸ್ಟರ್‌ಗಳ ನಿರ್ವಹಣೆ, ಸಾಲದ ದಸ್ತಾವೇಜುಗಳ ನಿರ್ವಹಣೆಯ ಪೂರ್ಣ ಜವಾಬ್ದಾರಿ.
7. ಪ್ರತಿ ವರ್ಷ ಮಾರ್ಚ್ ತಿಂಗಳಲ್ಲಿ ಸ್ಥಿರಾಸ್ತಿ ಮತ್ತು ಚರಾಸ್ತಿ ಬಗ್ಗೆ ನಿಗದಿತ ನಮೂನೆಯಲ್ಲಿ ಮಾಹಿತಿ ಕೇಂದ್ರ ಕಛೇರಿಗೆ ದೃಢೀಕರಿಸಿ ನೀಡುವುದು.
8. ಪ್ರತಿ ವರ್ಷ ನಿಗದಿತ ಅವಧಿಯಲ್ಲಿ ಆದಾಯ ತೆರಿಗೆ ಂಟಿಟಿexuಡಿe-I ರಲ್ಲಿ ಭರ್ತಿ ಮಾಡಿ ಕೇಂದ್ರ ಕಛೇರಿಗೆ ಸಲ್ಲಿಸುವುದು.
9. ಅಭಿವೃದ್ಧಿ ಅಧಿಕಾರಿ ಮತ್ತು ಸಹಾಯಕ ಅಭಿವೃದ್ಧಿ ಅಧಿಕಾರಿ ಹುದ್ದೆಗಳು ಖಾಲಿ ಇದ್ದ ಪಕ್ಷದಲ್ಲಿ ಎಲ್ಲಾ ಕೆಲಸಗಳ ಜವಾಬ್ದಾರಿ ಜಿಲ್ಲಾ ವ್ಯವಸ್ಥಾಪಕರವರೇ ನಿರ್ವಹಿಸುವುದು.
10. ಯಾವುದೇ ಸಾಲದ ಅರ್ಜಿ/ಪತ್ರ ಸ್ವೀಕರಸಿದ ನಂತರ ನಿರ್ದಿಷ್ಟ ಅವಧಿಯೊಳಗೆ ಕೈಕೊಂಡ ಕ್ರಮದ ಬಗ್ಗೆ ಅರ್ಜಿದಾರರಿಗೆ ಹಿಂಬರಹ/ಮಂಜೂರಾತಿ ನೀಡಬೇಕು.
11. ಅರ್ಜಿಗಳನ್ನು ಸ್ವೀಕರಿದ ನಂತರ, ಖುದ್ದು ಪ್ರತಿಯೊಬ್ಬ ಅರ್ಜಿದಾರರನ್ನು ಸಂಪರ್ಕಿಸಿ ಅರ್ಹತೆ ಮತ್ತು ಘಟಕದ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ನಿಗದಿತ ದಿನಾಂಕದೊಳಗೆ ಸಂಬಂಧಪಟ್ಟ ಆಯ್ಕೆ ಸಮಿತಿಗೆ ಮಂಡಿಸಿ, ಆಯ್ಕೆ ಪ್ರಕ್ರಿಯೆ ಪೂರ್ಣಗೊಳಿಸಬೇಕು.
12. ಪ್ರತಿಯೊಂದು ಯೋಜನೆಯಡಿ ಜಿಲ್ಲೆಯ ಎಲ್ಲಾ ಭಾಗದ ಮತೀಯ ಅಲ್ಪಸಂಖ್ಯಾತರಿಗೆ ಸಮಾನ ಅವಕಾಶ/ಸಾಲ ಸೌಲಭ್ಯ ದೊರಕುವಂತೆ ಆಯ್ಕೆ ಮಾಡಬೇಕು (80:10:10 ಅನುಪಾತದಲ್ಲಿ)
13. ಸಾಲ ಮಂಜೂರಾದಂತೆ, ಹಣ ಬಿಡುಗಡೆಗೆ ಮೊದಲು, ಮಂಜೂರಾತಿ ಆದೇಶದಲ್ಲಿ ತೋರಿಸಿರುವ/ಆಗಿಂದಾಗ್ಗೆ ನೀಡಿರುವ ನಿರ್ದೇಶನಗಳಂತೆ ದಾಖಲಾತಿಗಳನ್ನು/ಪೂರಕ ಭದ್ರತೆಗಳನ್ನು ಪಡೆಯಬೇಕು.
14. ಅರ್ಜಿಗಳನ್ನು ಬ್ಯಾಂಕುಗಳಿಗೆ ಶಿಫಾರಸು ಮಾಡುವಾಗ ಗುರಿಗೆ ತಕ್ಕಂತೆ/ಹಣಕಾಸು ಲಭ್ಯತೆ ಆಧರಿಸಿ ಅರ್ಜಿಗಳನ್ನು ಕಳುಹಿಸಬೇಕು.
15. ಎಲ್ಲಾ ಸಂದರ್ಭದಲ್ಲೂ ನಿಗಮದ ಮತ್ತು ಫಲಾನುಭವಿಗಳ ಹಿತವನ್ನು ಕಾಪಾಡುವ ರೀತಿಯಲ್ಲಿ ಕೆಲಸ ನಿರ್ವಹಿಸಬೇಕು.
16. ರಾಷ್ಟ್ರೀಕೃತ ಹಾಗೂ ಶೆಡ್ಯೂಲ್ಡ್ ಬ್ಯಾಂಕುಗಳಿಗೆ ಮಾತ್ರ ಸಾಲ ಮಂಜೂರಾತಿಗೆ ಶಿಫಾರಸ್ಸು ಮಾಡಬೇಕು.
17. ಬ್ಯಾಂಕುಗಳಿಗೆ ಸಹಾಯಧನ/ಅಂಚಿನ ಹಣ ಬಿಡುಗಡೆ ಮಾಡಿದ ಗರಿಷ್ಟ 30 ದಿನಗಳೊಳಗೆ ಬ್ಯಾಂಕ್ ಸಾಲದ ಜೊತೆ ಫಲಾನುಭವಿಗಳಿಗೆ ವಿತರಣೆಯಾಗುವಂತೆ ನೋಡಿಕೊಳ್ಳಬೇಕು.
18. ಆಗಿಂದಾಗ್ಗೆ ಬ್ಯಾಂಕ್ ಶಾಖೆಗಳಿಗೆ ಭೇಟಿ ನೀಡಿ ಹಣ ವಿತರಣೆಯಾದ ಬಗ್ಗೆ ಖಾತರಿಪಡಿಸಿಕೊಂಡು, ಹಣ ವಿನಿಯೋಗ ಪ್ರಮಾಣ ಪತ್ರ ಪಡೆದು ಕಡತಕ್ಕೆ ಜೋಡಿಸಿಕೊಳ್ಳಬೇಕು.
19. ಸಾಲ ವಸೂಲಾತಿಗೆ ಪ್ರಥಮ ಆದ್ಯತೆ ನೀಡಿ, ತಿಂಗಳವಾರು ನೀಡಿರುವ ಗುರಿಯನ್ನು ತಪ್ಪದೆ ಸಾಧಿಸಬೇಕು.
20. ಸುಸ್ತಿದಾರರಾದ ಫಲಾನುಭವಿಗಳಿಗೆ 3 ತಿಂಗಳಿಗೊಮ್ಮೆ ನೋಟೀಸ್ ನೀಡಬೇಕು. ಅವಶ್ಯವಿದ್ದಲ್ಲಿ ಇಂತಹ ಫಲಾನುಭವಿಗಳ ಸ್ವತ್ತು/ವಾಹನ ಸೀಜ್ ಮಾಡುವ ಅಧಿಕಾರ ಜಿಲ್ಲಾ ವ್ಯವಸ್ಥಾಪಕರಿಗೆ ನೀಡಲಾಗಿದೆ.
21. ಸಾಲ ಸೌಲಭ್ಯ ಒದಗಿಸಿದ ಒಂದು ತಿಂಗಳೊಳಗೆ, ಘಟಕ ಪರಿಶೀಲಿಸಿ, ಘಟಕ ಪರಿಶೀಲನಾ ವರದಿ ಮತ್ತು ಘಟಕದ ಪೋಟೋ ಕಡತದಲ್ಲಿ ಜೋಡಿಸಿಕೊಳ್ಳಬೇಕು.
22. ನಿಗಮದ ಜಿಲ್ಲಾ ಕಛೇರಿಯಿಂದ ಖರ್ಚು ಮಾಡಿದ ಪ್ರತಿ ಒಂದು ರೂಪಾಯಿಗೂ ಜಿಲ್ಲಾ ವ್ಯವಸ್ಥಾಪಕರು ಜವಾಬ್ದಾರರಾಗಿದ್ದು, ಸರಿಯಾದ ಲೆಕ್ಕಾಚಾರ ಇಟ್ಟುಕೊಳ್ಳಬೇಕು.
23. ನಿಗಮದಿಂದ ನೀಡಿದ ಸಾಲಗಳಿಗೆ ನಿಯಮಾನುಸಾರ ವಿಮೆಯನ್ನು ಕಡ್ಡಾಯವಾಗಿ ಮಾಡಿಸಬೇಕು.

24. ಸ್ವತ್ತು ಖರೀದಿಸುವಾಗ, ಸರಬರಾಜು ಮಾಡುವ ಸಂಸ್ಥೆಯು ಅಧಿಕೃತ ಸಂಸ್ಥೆಯಾಗಿ ಹೊಂದಿದೆಯೇ ನಮೂದಿಸಿದ ದರಗಳು ಸ್ಪರ್ಧಾತ್ಮಕವಾಗಿದೆಯೇ? ಸರಬರಾಜು ಮಾಡಲು ಶಕ್ತವಾಗಿದೆಯೇ ಎಂಬುದನ್ನು ಜಿಲ್ಲಾ ವ್ಯವಸ್ಥಾಪಕರು ಖಾತರಿ ಪಡಿಸಿಕೊಳ್ಳಬೇಕು.

25. ಸ್ವತ್ತುಗಳನ್ನು ಸರಬರಾಜುದಾರರಿಂದ ಫಲಾನುಭವಿಗಳಿೀಗೆ ವಿತರಿಸುವ ಸಮಯದಲ್ಲಿ ಜಿಲ್ಲಾ ವ್ಯವಸ್ಥಾಪಕರು ಹಾಗೂ ಇತರೆ ನಿಗಮದ ಅಧಿಕಾರಿಗಳು ಹಾಜರಿರಬೇಕು ಸ್ವತ್ತುಗಳನ್ನು ಸ್ವೀಕರಿಸಿದ ಬಗ್ಗೆ ಬಿಲ್ ಅಥವಾ ಮಹಜರ್ ವರದಿ ಮಾಡಿ ಫಲಾನುಭವಿಯ ಸಹಿ ಪಡೆಯಬೇಕು. ಇದಕ್ಕೆ ಸಾಕ್ಷಿಯಾಗಿ ಸರಬರಾಜುದಾರರ ಮತ್ತು ಜಿಲ್ಲಾ ವ್ಯವಸ್ಥಾಪಕರ ಸಹಿ ಪಡೆದು ಕಡತದಲ್ಲಿ ಜೋಡಿಸಬೇಕು.

26. ಸರಬರಾಜು ಸಂಸ್ಥೆಗೆ ಚೆಕ್ ನೀಡಿದಾಗ ತಪ್ಪದೆ ಸ್ವೀಕೃತಿ ಪಡೆದು ಕಡತದಲ್ಲಿ ಜೋಡಿಸಿಕೊಳ್ಳಬೇಕು. (ಕ್ರಾಸ್‌ಡ್‌ಚೆಕ್ ನೀಡಬೇಕು) ಚೆಕ್ ನೀಡುವುದಕ್ಕೆ ಮೊದಲು ಅಥವಾ ಚೆಕ್ ನೀಡುವಾಗಲೇ ಸ್ವತ್ತುಗಳು ಫಲಾನುಭವಿಯ ವಶಕ್ಕೆ ಸಿಗುವಂತೆ ನೋಡಿಕೊಳ್ಳಬೇಕು.

27. ಮಧ್ಯವರ್ತಿಗಳು ನಿಗಮದ ಫಲಾನುಭವಿಗಳ ಶೋಷಣೆ ಮಾಡುವುದನ್ನು ತಪ್ಪಿಸಬೇಕು.

28. ಫಲಾನುಭವಿಗಳಿಗೆ ಚೆಕ್ ನೀಡುವ ಸಂದರ್ಭದಲ್ಲಿ, ಕ್ರಾಸ್‌ಡ್‌ಚೆಕ್ ನೀಡಬೇಕು. ತದನಂತರ ಆಸ್ತಿ ಸೃಷ್ಟಿಸಲಾಗಿದೆಯೇ ಎಂಬುದನ್ನು ಸ್ಥಳ ಪರಿಶೀಲಿಸಿ ಕಡತದಲ್ಲಿ ರೆಕಾರ್ಡ್ ಮಾಡಬೇಕು.

29. ಕೇಂದ್ರ ಕಛೇರಿಯಿಂದ ಕಳುಹಿಸಿರುವ ಸುತ್ತೋಲೆಗಳನ್ನು ಒಂದು ಪ್ರತ್ಯೇಕ ಕಡತದಲ್ಲಿ ಜೋಡಿಸಿಕೊಂಡು, ವರ್ಷ ಕಳೆದ ನಂತರ ಇವುಗಳನ್ನು ಒಂದು ಪುಸ್ತಕದ ರೂಪದಲ್ಲಿ ಬೈಂಡ್ ಮಾಡಿಸಿ ಸುಸ್ಥಿತಿಯಲ್ಲಿಡಬೇಕು.

30. ಪ್ರತಿ 15 ದಿನಗಳಿಗೊಮ್ಮೆ ಜಿಲ್ಲಾ ಕಛೇರಿಯ ಸಿಬ್ಬಂದಿಗಳೊಂದಿಗೆ ಸಭೆ ಕರೆದು ಸಾಲ ವಸೂಲಾತಿ ಘಟಕ ತಪಾಸಣೆ, ಯೋಜನೆಗಳ ಅನುಷ್ಠಾನ ಕುರಿತಂತೆ ಸಭೆ ನಡೆಸಿ ಮುಂದಿನ 15 ದಿನಗಳಿಗೆ ಸಂಬಂಧಿಸಿದಂತೆ ಜರುಗಿಸಬೇಕಾದ ಕ್ರಮಗಳ ಕುರಿತು ಸಿಬ್ಬಂದಿಗೊಂದಿಗೆ ಚರ್ಚಿಸಿ ನಿರ್ಣಯಗಳನ್ನು ಕಾಲಕಾಲಕ್ಕೆ ತೆಗೆದುಕೊಳ್ಳಬೇಕು. ಸಭೆ ಕರೆದಿರುವ ಬಗ್ಗೆ ನಡವಳಿಕೆಗಳನ್ನು ದಾಖಲಿಸಬೇಕು.

31. ನಿಗಮವು ಅನುಷ್ಠಾನಗೊಳ್ಳಿಸುತ್ತಿರುವ ಎಲ್ಲಾ ಯೋಜನೆಗಳಿಂದ ಸೌಲಭ್ಯ ಪಡೆದವರ ಪಟ್ಟಿಯನ್ನು ಇಂಡೆಕ್ಸ್ ರಿಜಿಸ್ಟರ್‌ನಲ್ಲಿ ನೋಂದಾಯಿಸಬೇಕು ಮತ್ತು ಈ ಎಲ್ಲಾ ಮಾಹಿತಿಗಳನ್ನು ಗಣಕ ಯಂತ್ರಕ್ಕೆ ನೊಂದಾಯಿಸಬೇಕು. ಹೊಸದಾಗಿ ಯಾವುದೇ ಸಾಲಕ್ಕಾಗಿ ಅರ್ಜಿ ಬಂದಾಗ ಹಿಂದೆ ಇವರು ಈಗಾಗಲೇ ನಿಗಮದಿಂದ ಯಾವುದಾದರೂ ಯೋಜನೆಗಳಲ್ಲಿ ಸೌಲಭ್ಯ ಪಡೆದಿದ್ದಾರೆಯೇ ಎಂಬ ಬಗ್ಗೆ ದೃಢೀಕರಿಸಲು ಅನುಕೂಲವಾಗುತ್ತದೆ.

32. ಪ್ರತಿ ವರ್ಷ ಮಾರ್ಚ್ ಅಂತ್ಯಕ್ಕೆ ಜಿಲ್ಲಾ ಕಚೇರಿಯ ಸ್ವತ್ತುಗಳನ್ನು (ಚೇರ್, ಟೇಬಲ್ ಇತ್ಯಾದಿ) ಪಟ್ಟಿಮಾಡಿ, ಡೆಡ್‌ಸ್ಟಾಕ್ ಪರಿಶೀಲನೆ ನಡೆಸಿ, ಲಭ್ಯವಿರುವ ವಸ್ತುಗಳ ಪಟ್ಟಿಗೆ ದೃಢೀಕರಣ ಮಾಡಿ ಕಳುಹಿಸಬೇಕು.

33. ಜಿಲ್ಲಾ ಕಚೇರಿಯಲ್ಲಿರುವ ಎಲ್ಲಾ ವಸ್ತುಗಳು(ಸ್ಥಿರಾಸ್ತಿ ಮತ್ತು ಚರಾಸ್ತಿ) ಸುಸ್ಥಿಯಲ್ಲಿಡುವ ಜವಾಬ್ದಾರಿ ಜಿಲ್ಲಾ ವ್ಯವಸ್ಥಾಪಕರ ಹೊಣೆಯಾಗಿರುತ್ತದೆ.

34. ಸಾಲ ಮಂಜೂರಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಕಡತಗಳ ನಿರ್ವಹಣೆ ಹಾಗೂ ಪಡೆದ ದಾಖಲಾತಿಗಳು ಕ್ರಮಬದ್ಧವಾಗಿರುವ ಬಗ್ಗೆ ಖುದ್ದು ಪರಿಶೀಲಿಸಿದ ನಂತರವೇ ಹಣ ಬಿಡುಗಡೆಗೆ ಕ್ರಮ ಜರುಗಿಸುವುದು ಜಿಲ್ಲಾ ವ್ಯವಸ್ಥಾಪಕರ ಜವಾಬ್ದಾರಿಯಾಗಿರುತ್ತದೆ.

35. ಜಿಲ್ಲಾ ವ್ಯವಸ್ಥಾಪಕರು ಮತ್ತು ಸಿಬ್ಬಂದಿಯ ವಾರ್ಷಿಕ ಗೌಪ್ಯ ವರದಿ ಮತ್ತು ಆಸ್ತಿ ಹಾಗೂ ಸಾಲಗಳ ವಿವರಗಳನ್ನು ನಿಗದಿತ ದಿನಾಂಕದೊಳಗೆ ಕೇಂದ್ರ ಕಛೇರಿಗೆ ಕಳುಹಿಸಬೇಕು.

36. ಕೇಂದ್ರ ಕಛೇರಿಯಿಂದ ಕೇಳಿದ ವಾರದ/ವಾರ್ಷಿಕ/ಮಾಸಿಕ, ಸರ್ಕಾರದ ಸಭೆಗಳಿಗೆ ತುರ್ತಾಗಿ ಮಾಹಿತಿ ಒದಗಿಸಲು ಕೇಂದ್ರ ಕಛೇರಿಯಿಂದ ಇ-ಮೇಲ್ ಮುಖಾಂತರ ಕಳುಹಿಸುವ ಪತ್ರಗಳು/ಆದೇಶ ಇನ್ನಿತರೆ ಕೋರುವ ಮಾಹಿತಿಗಳಿಗೆ ವರದಿ/ಮಾಹಿತಿಗಳನ್ನು ನಿಗದಿತ ನಮೂನೆಯಲ್ಲಿ ನಿಗದಿಪಡಿಸಿದ ದಿನಾಂಕದೊಳಗೆ ಇ-ಮೇಲ್/ಅಂಚೆ ಮುಖಾಂತರ ಸಲ್ಲಿಸಬೇಕು.

37. ಲೋಕಸಭೆ ಮತ್ತು ವಿಧಾನಸಭೆ/ವಿಧಾನ ಪರಿಷತ್ತಿನ ಪ್ರಶ್ನೆಗಳಿಗೆ ಆದ್ಯ ಗಮನ ನೀಡಿ ಉತ್ತರಗಳನ್ನು ನಿಖರವಾಗಿ ಮತ್ತು ತುರ್ತಾಗಿ ಕಳುಹಿಸುವ ಜವಾಬ್ದಾರಿ ನಿಮ್ಮದಾಗಿರುತ್ತದೆ.

38. ಸ್ವ-ಮೌಲ್ಯಮಾಪನ ಮಾಡಿ, ನಿಗದಿಪಡಿಸಿದೆ ದಿನಾಂಕದೊಳಗೆ ಮೌಲ್ಯಮಾಪನ ವರದಿಯನ್ನು ಕೇಂದ್ರ ಕಛೇರಿಗೆ ಕಳುಹಿಸಬೇಕು.

39. ಕೇಂದ್ರ ಕಛೇರಿ ಸಭೆಗಳಲ್ಲಿ ಸೂಚಿಸಿ/ನಡವಳಿಗಳನ್ನು ತಯಾರಿಸಿ ಜಿಲ್ಲಾ ಕಛೇರಿಗಳಿಗೆ ಕಳುಹಿಸುವ ಸಾಲ ವಸೂಲಾತಿ ಗುರಿ ಸಾಧಿಸಬೇಕು ಮತ್ತು ಜಿಲ್ಲಾ ಕಛೇರಿಯ ಖರ್ಚು ವೆಚ್ಚಗಳನ್ನು ಆದಷ್ಟೂ ಕಡಿಮೆ ಮಾಡಬೇಕು.

40. ಅನಧಿಕೃತ ಗೈರು ಹಾಜರಾಗುವ ಸಿಬ್ಬಂದಿಗಳಿಗೆ ತಿಳಿಸಿ ಹೇಳಿ, ಇದೇ ಚಾಳಿ ಮರುಕಳಿಸಿದಲ್ಲಿ ಕೇಂದ್ರ ಕಛೇರಿಗೆ ವರದಿ ಸಲ್ಲಿಸಬೇಕು.

41. ಜಿಲ್ಲಾ ಮಟ್ಟದ/ತಾಲ್ಲೂಕು ಮಟ್ಟದ ಎಲ್ಲಾ ಸಭೆಗಳಿಗೆ ತಪ್ಪದೇ ಹಾಜರಾಗಬೇಕು.

42. ಪ್ರೊನೋಟ್‌ಗಳನ್ನು ಅವಧಿ ಮುಗಿಯುವ ಮುನ್ನ ನವೀಕರಿಸಬೇಕು

43. ರಾಷ್ಟ್ರೀಯ ನಿಗಮಗಳಿಂದ ಬಿಡುಗಡೆಯಾದ ಅವಧಿ ಸಾಲಕ್ಕೆ ಹಣ ವಿತರಿಸಿದ ಒಂದು ವಾರದೊಳಗೆ ನಿಗದಿತ ನಮೂನೆಯಲ್ಲಿ ಹಣ ವಿನಿಯೋಗ ಪತ್ರಗಳನ್ನು ಕೇಂದ್ರ ಕಛೇರಿಗೆ ಕಳುಹಿಸಬೇಕು.

44. ರಾಷ್ಟ್ರೀಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ನೇರ ಸಾಲದ ಯೋಜನೆಯಡಿಯಲ್ಲಿ ಮಂಜೂರಾಗಿರುವ ಸಾಲಕ್ಕೆ ಫಲಾನುಭವಿಗಳಿಂದ ಸಾಲ ಮತ್ತು ಬಡ್ಡಿ ಹಣ ಪೂರ್ಣವಾಗಿ ನಿಗಮಕ್ಕೆ ಸಂದಾಯವಾದ ನಂತರ ನಿಗಮದಲ್ಲಿ ಅಡಮಾನ ಮಾಡಿರುವ ಸ್ಥಿರಾಸ್ತಿ ದಾಖಲಾತಿಗಳನ್ನು ನಿಗಮದಿಂದ ಬಿಡುಗಡೆ ಮಾಡಿಸಿಕೊಂಡು ಅಡಮಾನ ರದ್ದುಗೊಳ್ಳಿಸಿ ಫಲಾನುಭವಿಗಳಿಗೆ ಹಿಂದಿರುಗಿಸುವ ಜವಾಬ್ದಾರಿ ಎಲ್ಲಾ ಜಿಲ್ಲೆಗಳ ಜಿಲ್ಲಾ ವ್ಯವಸ್ಥಾಪಕರ ಕರ್ತವ್ಯವಾಗಿರುತ್ತದೆ.

45. ನಿಗಮದ ಯೋಜನೆಗಳಲ್ಲಿ ಸಾಲ ಬಿಡುಗಡೆಯಾದ ನಂತರ, ಘಟಕದ ಸ್ಥಳ ಪರಿಶೀಲನೆ ಮಾಡಿ, ವಸ್ತು ಸ್ಥಿತಿಯನ್ನು ನಮೂದಿಸಿರುವ ವರದಿಯನ್ನು ಪ್ರತಿ ಕಡತದಲ್ಲೂ ಇಡುವುದು.

46. ಜಿಲ್ಲೆಯಲ್ಲಿ ಆಡಳಿತಾತ್ಮಕ ಮುಖ್ಯಸ್ಥರಾಗಿರುವ ಜಿಲ್ಲಾ ವ್ಯವಸ್ಥಾಪಕರು ಜಿಲ್ಲೆಯಲ್ಲಿನ ಎಲ್ಲಾ ಆಗು-ಹೋಗುಗಳಿಗೆ ಜವಾಬ್ದಾರರಾಗಿರುತ್ತಾರೆ.

47. ಆಯಾ ದಿನ ಬಿಡುಗಡೆಯಾದ ಸಾಲದ ಬಗ್ಗೆ ಲೆಡ್ಜರ್ ಖಾತೆ ತೆಗೆದು ಎಲ್ಲಾ ಮಾಹಿತಿಯನ್ನು ನಮೂದಿಸಬೇಕು, ಹಾಗೆಯೇ ಆಯಾ ದಿನ ವಸೂಲಾದ ಮೊತ್ತವನ್ನು ಸಂಬಂಧಪಟ್ಟ ಖಾತೆಗಳಿಗೆ ಅಂದೇ ಜಮಾ ಮಾಡಬೇಕು. ಇದೇ ರೀತಿ ಗಣಕೀಕರಣಗೊಳಿಸಿ ಪ್ರತಿಯೊಂದು ತಿಂಗಳ ಅಂತ್ಯಕ್ಕೂ ಡಿಸಿಬಿ ತಯಾರಿಸಿರಿ ಕೇಂದ್ರ ಕಛೇರಿಯ ಮರುಪಾವತಿ ವಿಭಾಗಕ್ಕೆ ವರದಿ ಸಲ್ಲಿಸಬೇಕು.

48. ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳ ಪ್ರವಾಸ ದಿನಚರಿ ಪಡೆದು ಪರಿಶೀಲನೆ ನಡೆಸಿ ವಿಮರ್ಶಾತ್ಮಕ ವರದಿಯನ್ನು ಕೇಂದ್ರ ಕಛೇರಿಗೆ ತಿಂಗಳ 15 ರೊಳಗೆ ತಲುಪುವಂತೆ ಕಳುಹಿಸಬೇಕು.

49. ಪ್ರತಿ ದಿನ ನಗದು ಪುಸ್ತಕವನ್ನು ಬರೆದು ದೃಢೀಕರಿಸುವುದು. ಇಂಪ್ರೆಸ್ಟ್ ವೋಚರ್‌ಗಳನ್ನು ದೃಢೀಕರಿಸುವುದು, ಕೇಂದ್ರ ಕಛೇರಿಯಿಂದ ಇಂಪ್ರೆಸ್ಟ್ ಹಣ ಪಡೆಯುವುದು, ಕೇಂದ್ರ ಕಛೇರಿಯ ಲೆಕ್ಕ ಪತ್ರಗಳೊಡನೆ ಜಿಲ್ಲಾ ಲೆಕ್ಕ ಪತ್ರಗಳನ್ನು ಸಮನ್ವಯ ಮಾಡಿಕೊಳ್ಳುವುದು.

50. ಜಿಲ್ಲಾ ಕಛೇರಿಯ ಲೆಕ್ಕ ಪುಸ್ತಕ ದೈನಂದಿನ ಆಧಾರದ ಮೇಲೆ ನಿರ್ವಹಣೆ ಜವಾಬ್ದಾರಿಯಾಗಿರುತ್ತದೆ.

51. ನಿಗಮದ ಜಿಲ್ಲಾ ಕಛೇರಿಯಿಂದ ಖರ್ಚು ಮಾಡಿದ ಪ್ರತಿ ಒಂದು ರೂಪಾಯಿಗೂ ಜಿಲ್ಲಾ ವ್ಯವಸ್ಥಾಪಕರು ಜವಾಬ್ದಾರರಾಗಿದ್ದು, ಸರಿಯಾದ ಲೆಕ್ಕಾಚಾರ ಇಟ್ಟುಕೊಳ್ಳಬೇಕು.

52. ರಶೀದಿ ಪುಸ್ತಕಗಳು (ತಿಂಗಳುವಾರು/ವರ್ಷಾವಾರು) ನಗದು ಇದ್ದಂತೆ ಇವುಗಳನ್ನು ಜಾಣ್ಮೆಯಿಂದ(Order-wise)ಭದ್ರವಾಗಿ ಕಪಾಟಿನಲ್ಲಿ ಇಟ್ಟುಕೊಳ್ಳುವ ಕರ್ತವ್ಯವಾಗಿರುತ್ತದೆ.

53. ಸಾಲ ಮಂಜೂರಾತಿ/ಬಿಡುಗಡೆ ಮಾಡುವಾಗ, ಫಲಾನುಭವಿಗಳಿಗೆ ಮಂಜೂರು ಮಾಡಲಾದ ಒಟ್ಟು ಮೊತ್ತ, ಅವಧಿ ಸಾಲ, ಸಹಾಯಧನ ಮತ್ತು ಅಂಚಿನ ಹಣದ ವಿವರ, ನಿಗದಿಪಡಿಸಿದೆ ಕಂತಿನ ವಿವರ, ಬಡ್ಡಿಯ ಪ್ರಮಾಣ ಇತ್ಯಾದಿ ವಿವರಗಳನ್ನೊಳಗೊಂಡ ಮಂಜೂರಾತಿ ಆದೇಶದ ಪ್ರತಿಯನ್ನು ಫಲಾನುಭವಿಗಳಿಗೆ ಕೊಡಬೇಕು.

54. ಪ್ರತಿಯೊಬ್ಬ ಫಲಾನುಭವಿಗೂ ಸಾಲದ ಪಾಸ್ ಬುಕ್ ಕೊಡಬೇಕು. ಕಂತು ತುಂಬಿದಾಗ, ಈ ಪಾಸ್ ಪುಸ್ತಕದಲ್ಲಿ ಎಂಟ್ರಿ ಮಾಡಿಕೊಡಬೇಕು.

55. ನಿಗಮದ ಯೋಜನೆಗಳ ಸಾಲ ಪಡೆದ ಫಲಾನುಭವಿಗಳಿಂದ ಮರುಪಾವತಿ ಪೂರ್ಣವಾಗಿ ಮಾಡಿಸಿಕೊಂಡು ಸಂಬಂಧಿಸಿದಂತೆ ಸಾಲ ತಿರುವಳಿ ಪತ್ರ ನೀಡಿ ಪ್ರತಿಯನ್ನು ಸಂಬಂಧಿಸಿದ ಲೋನ್ ಲೆಡ್ಜರ್‌ನಲ್ಲಿ ನಮೂದಿಸಿ ಗಣಕೀಕರಣಗೊಳಿಸಿ ಸಂಬಂಧಿಸಿದ ಖಾತೆ ಮುಕ್ತಯಗೊಳಿಸಿ ವರದಿ ನೀಡುವ ಜವಾಬ್ದಾರಿಯಾಗಿರುತ್ತದೆ.

56. ನಿಗಮಕ್ಕೆ ಸಂಬಂಧಿಸಿದಂತೆ Per Financial Code ಹಣಕಾಸಿನ ನಿರ್ವಹಣೆ ವೆಚ್ಚದ ಬಗ್ಗೆ ಆಗಿಂದಾಗ್ಗೆ ಕಾಲಕಾಲಕ್ಕೆ ಸರ್ಕಾರದಿಂದ ಹೊರಡಿಸುವ ಆದೇಶ, ಸುತ್ತೋಲೆ, ಮತ್ತು ಮಾರ್ಗದರ್ಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.

57. ಜಿಲ್ಲಾ ವ್ಯವಸ್ಥಾಪಕರು ಗಂಗಾ ಕಲ್ಯಾಣ ಯೋಜನೆಗೆ ಸಂಬಂಧಿಸಿದಂತೆ ನಿಯಮಾನುಸಾರ ಪ್ರಸ್ತಾವನೆ ಜಿಲ್ಲಾ ಸಮಿತಿಗೆ ಮಂಡಿಸುವುದು, ಸಂಬಂಧಿಸಿದ ಕ್ಷೇತ್ರ ಶಾಸಕರುಗಳಿಂದ ಅನುಮೋದನೆ ಪಡೆಯುವುದು, ಗುರಿಗೆ ಅನುಗುಣವಾಗಿ ನಡುವಳಿಗಳೊಂದಿಗೆ ಪ್ರಸ್ತಾವನೆಗಳನ್ನು ಕೇಂದ್ರ ಕಛೇರಿ ಸಲ್ಲಿಸುವುದು. ಗುತ್ತಿಗೆದಾರರಿಂದ ನಿಯಮಾನುಸಾರ ಮುಚ್ಚಳಿಕೆ ಪತ್ರ ಬರೆಸಿಕೊಳ್ಳುವುದು, ಅವಧಿಯೊಳಗೆ ಕೊಳವೆಬಾವಿ ಕೊರೆಸುವುದು, ಜಿಯೋಲಜಿಸ್ಟ ಮತ್ತು ಜಿಲ್ಲಾ ವ್ಯವಸ್ಥಾಪಕರ ಸಹಯೋಗದೊಂದಿಗೆ ಘಟಕ ಪರಿಶೀಲನೆ ನಡೆಸಿ ಪರಿಶೀಲನಾ ವರದಿ ಸಲ್ಲಿಸುವುದು, ನಿಗದಿತ ನಮೂನೆಯಲ್ಲಿ ದೃಡೀಕರಿಸಿ ಬಿಲ್ಲುಗಳನ್ನು ಸಲ್ಲಿಸುವುದು, ನಂತರದಲ್ಲಿ ಪಂಪು ಮೋಟಾರು ಮತ್ತು ಇತರೆ ಸಾಮಗ್ರಿಗಳನ್ನು ವಿತರಿಸುವ ಮುನ್ನಾ ಸಂಬಂಧಿಸಿದ ಗುತ್ತಿಗೆದಾರರಿಗೆ ಮುಚ್ಚಳಿಕೆ ಪತ್ರ ಬರೆಸಿಕೊಂಡು ಅವಧಿಯೊಳಗೆ ಪಂಪು ಮೋಟಾರು ಮತ್ತು ಇತರೆ ಸಾಮಗ್ರಿಗಳನ್ನು ಫಲಾನುಭವಿಗಳಿಗೆ ವಿತರಿಸಿ ನಿಗದಿತ ನಮೂನೆಯಲ್ಲಿ ದೃಡೀಕರಿಸಿ ಬಿಲ್ಲುಗಳನ್ನು ಸಲ್ಲಿಸುವುದು ನಂತರದಲ್ಲಿ ಜಿಲ್ಲಾ ಕಛೇರಿಯಿಂದ ಫಲಾನುಭವಿಗಳ ಕಡತಗಳನ್ನು ಸಂಬಂಧಿಸಿದ ಕೆಪಿಟಿಸಿಎಲ್ ಕಚೇರಿಗೆ ಠೇವಣಿಯೊಂದಿಗೆ ಪಾವತಿ ಸದರಿ ಅಧಿಕಾರಿಗಳೊಂದಿಗೆ ಫಲಾನುಭವಿಗಳ ಘಟಕಕ್ಕೆ ವಿದ್ಯುದ್ದೀಕರಣ ಕಾರ್ಯ ಕೈಗೊಂಡು ಮತ್ತೊಮ್ಮೆ ಘಟಕ ಪರಿಶೀಲನೆ ನಡೆಸಿ ಘಟಕ ಅನುಷ್ಠಾನವಾಗಿರುವ ಬಗ್ಗೆ ವರದಿ ಸಲ್ಲಿಸಿ ಈ ಯೋಜನೆಯನ್ನು ಅನುಷ್ಠಾನ ಮಾಡಿ ಯಶಸ್ವಿಗೊಳ್ಳಿಸುವ ಪೂರ್ಣ ಜವಾಬ್ದಾರಿ ಜಿಲ್ಲಾ ವ್ಯವಸ್ಥಾಪಕರದಾಗಿರುತ್ತದೆ.

58. ಮಾಹಿತಿ ಹಕ್ಕು ಅಧಿನಿಯಮ 2005ರ Chapter II, Section V(1) ರನ್ವಯ ನಿಗಮದ ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿದ್ದು, ಅರ್ಜಿದಾರರು ಕೋರುವ ಮಾಹಿತಿಯನ್ನು ನೇರವಾಗಿ ಒದಗಿಸುವುದು. ಹಾಗೂ ಜಿಲ್ಲೆಗಳಲ್ಲಿ ಮಾಹಿತಿ ಹಕ್ಕು ಅಧಿನಿಯಮ 2005ರಡಿ ನಿಯಮಾನುಸಾರ ಮಾಹಿತಿ ನೀಡದೇ ಇರುವ ಪ್ರಕರಣಗಳಲ್ಲಿ ಅರ್ಜಿದಾರರು ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು ಇವರಲ್ಲಿಗೆ ಮೇಲ್ಮನವಿ ಸಲ್ಲಿಸುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಆಯಾಯ ಜಿಲ್ಲೆಯ ಜಿಲ್ಲಾ ವ್ಯವಸ್ಥಾಪಕರನ್ನು ಜಿಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಗಳಾಗಿರುತ್ತಾರೆ ಸದರಿ ಅಧಿಕಾರಿಗಳು ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು ಇಲ್ಲಿಗೆ ವಿಚಾರಣೆ ಬಂದ ಪಕ್ಷದಲ್ಲಿ ಕರ್ನಾಟಕ ಮಾಹಿತಿ ಆಯೋಗ, ಬೆಂಗಳೂರು ಇವರು ಸೂಚಿಸುವ ದಿನಾಂಕ ಮತ್ತು ಸಮಯಕ್ಕೆ ವಿಚಾರಣೆ ನೇರವಾಗಿ ಹಾಜರಾಗಿ ಸದರಿ ಪ್ರಕರಣಗಳೀಗೆ ನಿಯಮಾನುಸಾರ ಮಾಹಿತಿ ಒದಗಿಸಿ ಜವಾಬ್ದಾರಿಯನ್ನು ಪಾಲಿಸುವುದು.

59. ನಿಗಮದ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ವಹಿಸಿದ ಇತರೆ ಕಛೇರಿ ಕರ್ತವ್ಯಗಳನ್ನು ನಿರ್ವಹಿಸುವುದು.

**3. 4(1)(ಬಿ)(iii) ರನ್ವಯ, ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ ಮಾರ್ಗಗಳು ಸೇರಿದಂತೆ ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನಗಳು:**

ಅಲ್ಪಸಂಖ್ಯಾತ ಜನಾಂಗದ ಸರ್ವಾಂಗೀಣ ಅಭಿವೃದ್ಧಿಗಾಗಿ ಕಾರ್ಯಕ್ರಮವನ್ನು ರೂಪಿಸಿ ನಿರ್ದೇಶಕ ಮಂಡಳಿ/ಸರ್ಕಾರದ ಅನುಮೋದನೆಯೊಂದಿಗೆ ಅನುಷ್ಠಾನಗೊಳಿಸಲಾಗುತ್ತದೆ. ಅನುಷ್ಠಾನದಲ್ಲಿನ ವಿಧಿ ವಿಧಾನಗಳ ಬಗ್ಗೆ ಸೂಕ್ತ ಆದೇಶ, ಸುತ್ತೋಲೆ ನೀಡಲಾಗುತ್ತದೆ. ಸಾಲಕ್ಕೆ ದಸ್ತಾವೇಜುಗಳನ್ನು ಮತ್ತು ನಿರ್ವಹಿಸಬೇಕಾದ ಲೆಕ್ಕಪತ್ರಗಳನ್ನು ಮತ್ತು ಅಧಿಕಾರಿಯ ಹೊಣೆಗಾರಿಕೆಯನ್ನು ತಿಳಿಸಲಾಗುತ್ತದೆ. ನಿಗಮದ ಕಾರ್ಯನಿರ್ವಹಣೆಯ ವಿಧಿ, ವಿಧಾನಗಳನ್ನು ಪ್ರಗತಿಯನ್ನು ಕೇಂದ್ರ ಕಛೇರಿ ಹಂತದಲ್ಲಿ ಹಾಗೂ ಅಲ್ಪಸಂಖ್ಯಾತ ಆಯೋಗವು ಸಹ ಸಮೀಕ್ಷಿಸಿ ಸೂಕ್ತ ಸೂಚನೆ/ನಿರ್ದೇಶನಗಳನ್ನು ನೀಡುವುದು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್ ಉಸ್ತುವಾರಿ ಸಚಿವರು ವಿವಿಧ ಸಮಿತಿಗಳು ಮೇಲುಸ್ತುವಾರಿ ಕಾರ್ಯಗಳನ್ನು ಸಮೀಕ್ಷಾ ಕಾರ್ಯಗಳನ್ನು ನಿರ್ವಹಣೆ ಮಾಡುತ್ತವೆ.

**4. 4(1)(ಬಿ)(iv) ಮತ್ತು 4(1)(ಬಿ) (ಗಿ) ರನ್ವಯ ಸಂಸ್ಥೆಯ ಕಾರ್ಯನಿರ್ವಹಣೆಗೆ ರೂಪಿಸಿರುವ ಸೂತ್ರಗಳು ಮತ್ತು ಅನುಸರಿಸಲಾಗುವ ನಿಯಮಾವಳಿಗಳು, ನಿರ್ದೇಶನಗಳು/ ಅನುಸೂಚಿಗಳು;**

ಸರ್ಕಾರವು ಆಯಾ ವರ್ಷಗಳಲ್ಲಿ ನೀಡುವ ಷೇರು ಬಂಡವಾಳ, ಅನುದಾನಗಳ ಹಣವನ್ನು ಅವಲಂಬಿಸಿ ಜಿಲ್ಲೆಯ ಜನ ಸಂಖ್ಯೆಯನ್ನಾಧರಿಸಿ ಜಿಲ್ಲಾವಾರು ಭೌತಿಕ ಗುರಿಗಳನ್ನು ನಿಗಮದ ಕೇಂದ್ರ ಕಛೇರಿಯ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ರೂಪಿಸಲಾಗುವುದು. ಅದರಂತೆ ನಿಗಮದ ಕೇಂದ್ರ ಕಛೇರಿಯಿಂದ ನೀಡಿರುವ ಗುರಿಯನ್ನು ವಿಧಾನಸಭಾ ಕ್ಷೇತ್ರವಾರು ಹಂಚಿಕೆ ಮಾಡಿ ಲೀಡ್‌ಬ್ಯಾಂಕ್ ಮೂಲಕ ಶಾಖಾವಾರು ಗುರಿಯನ್ನು ನಿಗಧಿಪಡಿಸಲಾಗುತ್ತದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ತಾಲ್ಲೂಕು ಮಟ್ಟದ ಅಧಿಕಾರಿಗಳ ಕಛೇರಿಯಲ್ಲಿ ಗುರಿ ಮತ್ತು ಅನುಸರಿಸಬೇಕಾದ ವಿಧಾನದ ಬಗ್ಗೆ ಸಾರ್ವಜನಿಕರಿಗೆ ತಿಳಿಸಲು ನಿಗಮವು ಕ್ರಮ ವಹಿಸಿರುತ್ತದೆ.

ಸಾರ್ವಜನಿಕರಿಗೆ ನಿಗಮದ ಕಾರ್ಯಚಟುವಟಿಕೆಗಳ ಪರಿಚಯವನ್ನು ಮತ್ತು ಮಾಹಿತಿಯನ್ನು ನೀಡಲು ಯೋಜನೆಗಳ ವಿವರಗಳನ್ನೊಳಗೊಂಡ ಕಿರುಹೊತ್ತಿಗೆಗಳನ್ನು ಮುದ್ರಿಸಿ ವಿತರಿಸಲಾಗುತ್ತಿದೆ. ಹಾಗೂ ನಿಗಮದ ಕೇಂದ್ರ ಕಛೇರಿ ಮತ್ತು ಜಿಲ್ಲಾ ಕಛೇರಿಗಳ ಸೂಚನಾ ಫಲಕಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ಆಯಾ ಯೋಜನೆಯ ಗುರಿಯನ್ನು ಸಾರ್ವಜನಿಕರ ಗಮನಕ್ಕಾಗಿ ಪ್ರಕಟಿಸಲು ಕ್ರಮವಹಿಸಲಾಗಿದೆ.

## 5. 4(1)(ಬಿ)(vi) ರನ್ವಯ ಸಂಸ್ಥೆಯು ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ವಿವರಗಳು:-

ನಿಗಮವು ಕಂಪನಿ ಕಾಯ್ದೆ ಅನ್ವಯ ನಿರ್ವಹಣೆ ಮಾಡಬೇಕಾದ ರಿಜಿಸ್ಟರ್‌ಗಳನ್ನು, ಮ್ಯಾನ್ಯುಯಲ್‌ಗಳನ್ನು, ಸರ್ಟಿಫಿಕೇಟ್‌ಗಳನ್ನು, ಪ್ರಪತ್ರಗಳನ್ನು ಹಾಗೂ ಸರ್ಕಾರದಿಂದ ಕಾಲ ಕಾಲಕ್ಕೆ ನೀಡುವ ಸೂಚನೆಗಳನ್ವಯ ನಿರ್ವಹಣೆ ಮಾಡಲಾಗುತ್ತದೆ. ಹಾಲಿ ಇರುವ ಪ್ರಮುಖ ದಾಖಲೆಗಳು ಈ ಕೆಳಕಂಡಂತೆ ಇವೆ.

(1) ಒemoಡಿಚಿಟಿಜum oಜಿ ◌Ossoಛಿiಚಿಣioಟಿ & ◌ಂಡಿಣiಛಿಟes oಜಿ ◌Ossoಛಿiಚಿಣioಟಿ.

ನಿಗಮವು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ, ಸಾಲ ಮಂಜೂರಾತಿಗೆ ಅರ್ಜಿದಾರರು ವೆಬ್‌ಪೇಜ್ ಮೂಲಕ ಆನ್‌ಲೈನ್ ಮಾಡಿ ನಂತರ ಅಗತ್ಯ ದಾಖಲಾತಿಗಳೊಂದಿಗೆ ಜಿಲ್ಲಾ ಕಛೇರಿಗೆ ಸಲ್ಲಿಸಬೇಕು ಮತ್ತು ವಿವರ ಈ ಮುಂದಿನಂತಿದೆ.

**<u>Scheme-wise Loan Documentation Chart</u>**

| Sl.No. | Scheme | Annexure Number | By Whom? |
|---|---|---|---|
| **1** | **Arivu (Education) Loan Scheme** | | |
| (a) | Indemnity Bond | 1 | By the Borrower & Parents |
| **2** | **Shramasakthi Loan Scheme** | | |
| (a) | Promissory Note | I | By the Borrower |
| (b) | Demand Promissory Note Delivery letter | II | |
| (c) | Consideration Receipt | III | |
| (d) | Acknowledgement of Debit Form | IV | |
| (e) | Letter of Repayment | V | |
| (f) | Hypothecation Deed | VI | |
| (g) | Memorandum of Agreement | VII | |
| (h) | Letter of Guarantee | VIII | In case of Guarantor |
| **3** | **Micro Loan Scheme** | | |
| (a) | Promissory Note | I | By the Borrower |
| (b) | Demand Promissory Note Delivery letter | II | |
| (c) | Consideration Receipt | III | |
| (d) | Acknowledgement of Debit Form | IV | |
| (e) | Letter of Repayment | V | |
| (f) | Hypothecation Deed | VI | |
| (g) | Memorandum of Agreement | VII | |
| (h) | Letter of Guarantee | VIII | In case of Guarantor |

| Sl.No. | Scheme | Annexure Number | By Whom? |
|---|---|---|---|
| **4** | **Dairy Scheme** | | |
| (a) | Promissory Note | I | By the Borrower |
| (b) | Demand Promissory Note Delivery letter | II | |
| (c) | Consideration Receipt | III | |
| (d) | Acknowledgement of Debit Form | IV | |
| (e) | Letter of Repayment | V | |
| (f) | Hypothecation Deed | VI | |
| (g) | Memorandum of Agreement | VII | |
| (h) | Letter of Guarantee | VIII | In case of Guarantor |
| **5** | **Farmers Welfare** | | |
| (a) | Promissory Note | I | By the Borrower |
| (b) | Demand Promissory Note Delivery letter | II | |
| (c) | Consideration Receipt | III | |
| (d) | Acknowledgement of Debit Form | IV | |
| (e) | Letter of Repayment | V | |
| (f) | Hypothecation Deed | VI | |
| (g) | Memorandum of Agreement | VII | |
| (h) | Letter of Guarantee | VIII | In case of Guarantor |
| **6** | **Taxi/Goods Scheme** | | |
| (a) | Utilisation of Subsidy | 1 | By Bank |
| (b) | Memorandum of Agreement | 2 | By the Borrower |
| **7** | **Mane Malige Scheme** | | |
| (a) | Promissory Note | I | By the Borrower |
| (b) | Demand Promissory Note Delivery letter | II | |
| (c) | Consideration Receipt | III | |
| (d) | Acknowledgement of Debit Form | IV | |
| (e) | Letter of Repayment | V | |
| (f) | Hypothecation Deed | VI | |
| (g) | Memorandum of Agreement | VII | |
| (h) | Letter of Guarantee | VIII | In case of Guarantor |
| **8** | **Vruthi Prothsaha Scheme** | | |
| (a) | Utilisation of Subsidy | 1 | By Bank |
| (b) | Memorandum of Agreement | 2 | By the Borrower |

| Sl.No. | Scheme | Annexure Number | By Whom? |
|---|---|---|---|
| **9** | **Housing Loan Margin Money Scheme** | | |
| (a) | Promissory Note | I | By the Borrower |
| (b) | Demand Promissory Note Delivery letter | II | |
| (c) | Consideration Receipt | III | |
| (d) | Acknowledgement of Debit Form | IV | |
| (e) | Letter of Repayment | V | |
| (f) | Hypothecation Deed | VI | |
| (g) | Memorandum of Agreement | VII | |
| (h) | Letter of Guarantee | VIII | In case of Guarantor |
| **10** | **Automobile & Silk Reeling Scheme** | | |
| (a) | Promissory Note | I | By the Borrower |
| (b) | Demand Promissory Note Delivery letter | II | |
| (c) | Consideration Receipt | III | |
| (d) | Acknowledgement of Debit Form | IV | |
| (e) | Letter of Repayment | V | |
| (f) | Hypothecation Deed | VI | |
| (g) | Memorandum of Agreement | VII | |
| (h) | Letter of Guarantee | VIII | In case of Guarantor |

**6. 4(1) (ಬಿ) (VII) ರನ್ವಯ ಸಂಸ್ಥೆಯ ನೀತಿ ನಿರೂಪಣೆ ಮತ್ತು ಸಂಸ್ಥೆಯ ಯೋಜನೆಗಳ ಅನುಷ್ಠಾನ ಸಂಬಂಧದಲ್ಲಿ ಸಾರ್ವಜನಿಕರು/ ಪ್ರತಿನಿಧಿಗಳೊಂದಿಗೆ ಸಮನ್ವಯತೆಯ ವಿವರಗಳು.**

ನಿಗಮದ ಯೋಜನೆಗಳ ಅನುಷ್ಠಾನ ಮತ್ತು ನೀತಿ ನಿರೂಪಣೆಯಲ್ಲಿನ ನ್ಯೂನ್ಯತೆಗಳನ್ನು ತಿಳಿಯಲು ನಿಗಮವು ಈ ಕೆಳಕಂಡ ಕ್ರಮಗಳನ್ನು ಅಲ್ಪಸಂಖಾತರ ವರ್ಗಗಳ ಜನರ ಸಮನ್ವಯದೊಂದಿಗೆ ಕ್ರಮವಹಿಸಿದೆ.

1. ಅಲ್ಪಸಂಖಾತರ ಒಕ್ಕೂಟ ಹಾಗೂ ಸಂಘ ಸಂಸ್ಥೆಗಳ ಮುಖಂಡರು ಆಯಾ ಪ್ರದೇಶದಲ್ಲಿ ಅಲ್ಪಸಂಖ್ಯಾತ ವರ್ಗಗಳ ಜನರಿಗೆ ಅಗತ್ಯವಿರುವ ಆರ್ಥಿಕ ಚಟುವಟಿಕೆಗಳ ಬೇಡಿಕೆಯಿರುವ ಬಗ್ಗೆ ನಿಗಮದ ಯೋಜನೆಗಳ ಅನುಷ್ಠಾನದಲ್ಲಿರುವ ನ್ಯೂನ್ಯತೆಗಳನ್ನು ಪರಿಷ್ಕರಿಸುವುದು ಅಲ್ಪಸಂಖ್ಯಾತರ ವರ್ಗಗಳ ಮುಖಂಡರುಗಳ ಸಭೆಯನ್ನು ಆಗಾಗ್ಗೆ ಏರ್ಪಡಿಸಲಾಗುತ್ತದೆ.
2. ಸಂವಾದ; ನಿಗಮದ ಯೋಜನೆಗಳ ಬಗ್ಗೆ ಅರಿವು ಹಾಗೂ ಅನುಷ್ಠಾನದಲ್ಲಿನ ನ್ಯೂನ್ಯತೆ ಮತ್ತು ಕೊರತೆಗಳನ್ನು ತಿಳಿಯಲು ಜಿಲ್ಲಾ/ತಾಲ್ಲೂಕು/ಗ್ರಾಮ ಮಟ್ಟದಲ್ಲಿ "ಸಂವಾದ" ಕಾರ್ಯಕ್ರಮಗಳನ್ನು ಮತ್ತು ಕುಂದು ಕೊರತೆ ನಿವಾರಣಾ ಕಾರ್ಯಕ್ರಮಗಳನ್ನು ಪ್ರತಿ ತಿಂಗಳು ಕಡ್ಡಾಯವಾಗಿ ಹಮ್ಮಿಕೊಳ್ಳಬೇಕು.
3. ಸಾಲ ವಿತರಣಾ ಪೂರ್ವ ಸಮಾಲೋಚನೆ: ಸಾಲ ಪಡೆಯಲು ಪೂರ್ಣ ಮಾಹಿತಿಯನ್ನು ಫಲಾನುಭವಿಗಳಿಗೆ ನೀಡಲು, ಸಾಲ ಮತ್ತು ಸಬ್ಸಿಡಿಯ ಮಹತ್ವವನ್ನು ತಿಳಿಯಲು ಸಾಲ ಸದುಪಯೋಗದ ಬಗ್ಗೆ ತಿಳಿಸಲು ಅವರ ಸಾಲಕ್ಕೆ ಮಾರುಕಟ್ಟೆ ವ್ಯವಸ್ಥೆಯನ್ನು ತಿಳಿಸಲು ಕಡ್ಡಾಯವಾಗಿ ಸಾಲ ವಿತರಣಾಪೂರ್ವ ಸಮಾಲೋಚನೆಯನ್ನು ನಿರಂತರವಾಗಿ ಹಮ್ಮಿಕೊಳ್ಳಬೇಕು.
4. ಸಾಲ ವಿತರಣೋತ್ತರ ಪರ್ಯಾಲೋಚನೆ: ಸಾಲ ದುರುಪಯೋಗವಾಗುವುದನ್ನು ತಡೆಗಟ್ಟಲು ಯೋಜನೆಯ ಅನುಷ್ಠಾನ ಮತ್ತು ಘಟಕ ಸ್ಥಾಪನೆಯ ಬಗ್ಗೆ ನ್ಯೂನ್ಯತೆ ಮತ್ತು ಕೊರತೆಗಳ ಬಗ್ಗೆ ತಿಳಿಯಲು ಸಾಲ ಪಡೆದ ಫಲಾನುಭವಿಗಳೊಂದಿಗೆ ಪರ್ಯಾಲೋಚನಾ ಸಭೆಗಳನ್ನು ನಡೆಸುವುದು ಮತ್ತು ಘಟಕಗಳನ್ನು ತಪಾಸಿಸಿ ಸೂಕ್ತ ತಿಳುವಳಿಕೆಯನ್ನು ಫಲಾನುಭವಿಗಳಿಗೆ ನೀಡುವ ಕ್ರಮ ಕೈಗೊಳ್ಳಲಾಗಿದೆ.
5. ಸಾಮರ್ಥ್ಯವರ್ಧನಾ ಕಾರ್ಯಗಾರ: ನಿಗಮದ ಅಧಕಾರಿ/ನೌಕರರಿಗೆ ಹೆಚ್ಚು ಉತ್ತೇಜನ ನೀಡಿ ಅವರನ್ನು ಕ್ರಿಯಾಶೀಲರಾಗಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಅಗತ್ಯವಿರುವ ತರಬೇತಿಯನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ.
6. ಪ್ರಚಾರ: ಪತ್ರಿಕೆಗಳು, ಕರ ಪತ್ರಗಳು, ಭಿತ್ತಿ ಪತ್ರಗಳು, ಕೈಪಿಡಿಗಳ ಮೂಲಕ ಪ್ರಚಾರಂದೋಲನಾ ಕಾರ್ಯವನ್ನು ಹಮ್ಮಿಕೊಂಡು ಪ್ರಚಾರ ಮಾಡಲಾಗುತ್ತಿದೆ.
7. ಸಾಮಾಜಿಕ ಆರ್ಥಿಕ ಸಬಲೀಕರಣ:
8. ಸ್ವಯಂ ಉದ್ಯೋಗ, ನೀರಾವರಿ ಮತ್ತು ಅಲ್ಪಸಂಖ್ಯಾತ ವರ್ಗಗಳಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಸಬಲೀಕರಣಕ್ಕೆ ಅಗತ್ಯವಾದ ಆದಾಯ ತರುವಂತಹ ಚಟುವಟಿಕೆಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು.
9. ಅಲ್ಪಸಂಖ್ಯಾತ ವರ್ಗಗಳ ಜನರು ಸ್ವÀ-ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಅನುವಾಗುವಂತೆ ಸಾಲಸೌಲಭ್ಯಗಳನ್ನು ನೀಡಲಾಗುತ್ತಿದೆ.
10. ವಿಧವೆಯರು/ಪರಿತ್ಯಕ್ತರು/ಅಂಗವಿಕಲರಿಗೆ ಪ್ರಥಮ ಆದ್ಯತೆ ನೀಡಲಾಗುತ್ತಿದೆ.

**7. 4(1)(ಬಿ)(VIII) ರನ್ವಯ ಸಂಸ್ಥೆಯ ಉದ್ದೇಶಗಳನ್ನು ಈಡೇರಿಸಲು 2 ಅಥವಾ ಅದಕ್ಕಿಂತ ಹೆಚ್ಚು ಸದಸ್ಯರಿಂದ ರಚಿಸಲ್ಪಟ್ಟ ಸಮಿತಿ, ಷರತ್ತು, ಮಂಡಳಿಗಳು ಮತ್ತು ಅದರ ಹೇಳಿಕೆಗಳು ಹಾಗೂ ಆ ಪರಿಷತ್ತು , ಮಂಡಳಿ, ಸಮಿತಿಯ ಸದಸ್ಯರು ನಡೆಸಿದ ಸಭೆಯ ನಡವಳಿಗಳು/ನಿರ್ಣಯಗಳು ಸಾರ್ವಜನಿಕರಿಗಾಗಿ ಲಭ್ಯತೆಯ ಮಾಹಿತಿ.**

1. ಸರ್ಕಾರವು ಕಂಪನಿ ಕಾಯ್ದೆ ಅನ್ವಯ ನಿಗಮವನ್ನು ಸ್ಥಾಪಿಸಿರುತ್ತದೆ. ನಿಗಮದ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಪ್ರಕಾರ ನಿರ್ದೇಶಕ ಮಂಡಳಿಯನ್ನು ರಚಿಸಿರುತ್ತದೆ. ಈ ಮಂಡಳಿಯ ಸದಸ್ಯರನ್ನು ಸರ್ಕಾರವು ಕಾಲ ಕಾಲಕ್ಕೆ ನೇಮಕ ಮಾಡುತ್ತದೆ. ಮಂಡಳಿಯು ಕೈಗೊಳ್ಳುವ ನಿರ್ಣಯಗಳನ್ನು ಕೆಳಗಿನ ಹಂತಕ್ಕೆ ತಿಳಿಸಲು ಸುತ್ತೋಲೆ ಆದೇಶಗಳನ್ನು ಹೊರಡಿಸಲಾಗುತ್ತದೆ. ಇವುಗಳನ್ನು ಸಾರ್ವಜನಿಕರಿಗೆ ಕೈಪಿಡಿಯಲ್ಲಿ ಇಲ್ಲವೆ, ನೋಟಿಸ್ ಬೋರ್ಡ್‌ಗಳಲ್ಲಿ ಪ್ರಕಟಿಸಲಾಗುತ್ತದೆ. ವಾರ್ಷಿಕ ಲೆಕ್ಕ ತಪಾಸಣಾ ವರದಿಗಳು ಸಹ ಸಾರ್ವಜನಿಕರ ಅವಗಾಹನೆಗೆ ಲಭ್ಯವಿರುತ್ತದೆ.
2. ವಿಧಾನಸಭಾ ಕ್ಷೇತ್ರ ಮಟ್ಟದಲ್ಲಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಶ್ರಮಶಕ್ತಿ ಸಾಲ ಯೋಜನೆ, ಮೈಕ್ರೋ ಸಾಲ ಯೋಜನೆ, ಮತ್ತು ಗಂಗಾ ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯಲ್ಲಿ ತಾಲ್ಲೂಕಿನಲ್ಲಿ ಖಾಯಂ ಆಗಿ ವಾಸಿಸುತ್ತಿರುವ ವಿಧಾನ ಪರಿಷತ್ ಸದಸ್ಯರು, ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ಕಾರ್ಯಪಾಲಕ ಅಭಿಯಂತರು ಲೋಕೋಪಯೋಗಿ ಇಲಾಖೆ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ವಿದ್ಯುಚ್ಛಕ್ತಿ ಕಂಪನಿ(ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ), ಸಂಬಂಧಿಸಿದ ತಾಲ್ಲೂಕು ತಹಸೀಲ್ದಾರರು, ತಾಲ್ಲೂಕಿನ ಸಹಾಯಕ ನಿರ್ದೇಶಕರು ಕೃಷಿ ಇಲಾಖೆ, ಲೀಡ್ ಬ್ಯಾಂಕ್ ಆಫಿಸರ್/ಪ್ರತಿನಿಧಿ ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ನಿಗಮದ ಜಿಲ್ಲಾ ವ್ಯವಸ್ಥಾಪಕರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗೆ ಅಭಿವೃದ್ಧಿ ಅಧಿಕಾರಿ/ಸಹಾಯಕ ಅಭಿವೃದ್ಧಿ ಅಧಿಕಾರಿಗಳು ಸಹಾಯಕರಾಗಿ ಎಲ್ಲಾ ಕಾರ್ಯಗಳನ್ನು ನಿರ್ವಹಿಸುವರು. ಆಯ್ಕೆ ಸಮಿತಿಯು ಕೈಗೊಳ್ಳುವ ನಿರ್ಣಯಗಳನ್ನು ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಲಾಗುತ್ತದೆ. ಮತ್ತು ಸಂಬಂಧಪಟ್ಟ ಫಲಾನುಭವಿಗಳಿಗೆ ಆದೇಶ ಪತ್ರಗಳನ್ನು ಕಳುಹಿಸಲಾಗುವುದು.
3. ನಿಗಮವು ಅನುಷ್ಠಾನಗೊಳಿಸುತ್ತಿರುವ ಅರಿವು ಯೋಜನೆ, ವೃತ್ತಿ ಪ್ರೋತ್ಸಾಹ ಯೋಜನೆ, ಆಟೋ ಮೊಬೈಲ್ ಮತ್ತು ಸಿಲ್ಕ್ ರೀಲಿಂಗ್ ಯೋಜನೆ, ಮನೆ ಮಳಿಗೆ ಯೋಜನೆ ಮತ್ತು ಗೃಹ ನಿರ್ಮಾಣ ಮಾರ್ಜಿನ್ ಹಣ ಸಾಲ ಯೋಜನೆಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹÀಣಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಯ್ಕೆ ಸಮಿತಿಯನ್ನು ರಚಿಸಲಾಗುತ್ತದೆ. ಈ ಆಯ್ಕೆ ಸಮಿತಿಯಲ್ಲಿ ಲೀಡ್ ಬ್ಯಾಂಕ್ ವ್ಯವಸ್ಥಾಪಕರು, ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಜಿಲ್ಲಾ ಅಧಿಕಾರಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಪ್ರಧಾನ ವ್ಯವಸ್ಥಾಫಕರು, ಉಪ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಸಹಕರ ಸಂಘಗಳ ಉಪ ನಿಬಂಧಕರು ಮತ್ತು ಜನರಲ್ ಮ್ಯಾನೇಜರ್(ಸೂಪರಿಂಟೆಂಟೆಂಟ್ ಇಂಜಿನಿಯರ್) ವಿದ್ಯುತ್ ಸರಬರಾಜು ಕಂಪನಿ ಯವರುಗಳು ಸದಸ್ಯರಾಗಿರುತ್ತಾರೆ. ಜಿಲ್ಲಾ ವ್ಯವಸ್ಥಾಪಕರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗೆ ಅಭಿವೃದ್ಧಿ ಅಧಿಕಾರಿ/ಅಭಿವೃದ್ಧಿ ಪರಿವೀಕ್ಷಕರು ಎಲ್ಲಾ ಕಛೇರಿ ಕಾರ್ಯಗಳನ್ನು ನಿರ್ವಹಿಸುವರು. ಆಯ್ಕೆ ಸಮಿತಿಯು ಕೈಗೊಳ್ಳುವ ನಿರ್ಣಯಗಳನ್ನು ನೋಟಿಸ್ ಬೋರ್ಡ್‌ನಲ್ಲಿ

ಪ್ರಕಟಿಸಲಾಗುತ್ತದೆ. ಮತ್ತು ಸಂಬಂಧಪಟ್ಟ ಫಲಾನುಭವಿಗಳಿಗೆ ಆದೇಶ ಪತ್ರಗಳನ್ನು ಕಳುಹಿಸಲಾಗುವುದು.

4. ನಿಗಮವು ಅನುಷ್ಠಾನಗೊಳಿಸುತ್ತಿರುವ ಪಶುಸಂಗೋಪನೆ ಯೋಜನೆÉ, ಅಲ್ಪಸಂಖ್ಯಾತರ ರೈತರ ಕಲ್ಯಾಣ ಯೋಜನೆ( ಕೃಷಿ ಯಂತ್ರೋಪಕರಣಕೊಳ್ಳಲು), ಟ್ಯಾಕ್ಸಿ/ಗೂಡ್ಸ್ ವಾಹನ ಯೋಜನೆ, ಕೃಷಿ ಭೂಮಿ ಖರೀದಿ ಯೋಜನೆ, ಕೊಲ್ಲಿ ರಾಷ್ಟ್ರಗಳಲ್ಲಿ ಕೆಲಸ ಮಾಡಿ ಹಿಂತಿರುಗಿರುವ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಸಾಲ ಯೋಜನೆಗಳನ್ನು ಅನುಷ್ಠಾನಗೊಳಿಸಲು ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಯ್ಕೆ ಸಮಿತಿಯನ್ನು ರಚಿಸಲಾಗುತ್ತದೆ. ಈ ಆಯ್ಕೆ ಸಮಿತಿಯಲ್ಲಿ ಲೀಡ್ ಬ್ಯಾಂಕ್ ವ್ಯವಸ್ಥಾಪಕರು, ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಜಿಲ್ಲಾ ಅಧಿಕಾರಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಜಿಲ್ಲಾ ಪಶುಸಂಗೋಪನಾಧಿಕಾರಿಗಳು, ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಜಂಟಿ ನಿರ್ದೇಶಕರು, ಕೃಷಿ ಇಲಾಖೆರವರುಗಳು ಸದಸ್ಯರಾಗಿರುತ್ತಾರೆ. ನಿಗಮದ ಜಿಲ್ಲಾ ವ್ಯವಸ್ಥಾಪಕರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗೆ ಅಭಿವೃದ್ಧಿ ಅಧಿಕಾರಿ/ಅಭಿವೃದ್ಧಿ ಪರಿವೀಕ್ಷಕರು ಸಹಾಯಕರಾಗಿ ಎಲ್ಲಾ ಕಛೇರಿ ಕಾರ್ಯಗಳನ್ನು ನಿರ್ವಹಿಸುವರು. ಆಯ್ಕೆ ಸಮಿತಿಯು ಕೈಗೊಳ್ಳುವ ನಿರ್ಣಯಗಳನ್ನು ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಲಾಗುತ್ತದೆ. ಮತ್ತು ಸಂಬಂಧಪಟ್ಟ ಫಲಾನುಭವಿಗಳಿಗೆ ಆದೇಶ ಪತ್ರಗಳನ್ನು ಕಳುಹಿಸಲಾಗುವುದು.

**8. 4(1)(ಬಿ)( ix)ರನ್ವಯ ಸಂಸ್ಥೆಯ ಅಧಿಕಾರಿಗಳ ಮತ್ತು ನೌಕರರ ದೂರವಾಣಿ ವಿವರಗಳು:**

**ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧಿಕೃತ ಕಛೇರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆ ಹಾಗೂ ಅಧಿಕಾರಿಗಳ ಹೆಸರು ಮತ್ತು ದೂರವಾಣಿ ಸಂಖ್ಯೆ ಈ ಮುಂದಿನಂತೆ ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಿಸಿದೆ.**

**ಸಂಸ್ಥೆಯ ವಿಳಾಸ**

**<u>ಕೇಂದ್ರ ಕಛೇರಿ:</u>**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಬೆಂಗಳೂರು
ವಿಶ್ವೇಶ್ವರಯ್ಯ ಕೇಂದ್ರ, 12ನೇ ಮಹಡಿ, ಮುಖ್ಯ ಗೋಪುರ, ಡಾ||ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು-560001.

ದೂರವಾಣಿ ಸಂಖ್ಯೆ: 080-22860999
080-22864782

ಇ-ಮೇಲ್: kmdc.ho.info@gmail.com

Website: www.kmdc.karnataka.gov.in

**ನಿಗಮವು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಿಗೆ ಅರ್ಜಿ ಸಲ್ಲಿಸುವ ವೆಬ್‌ಸೈಟ್ ವಿವರಗಳು:**

ಅರಿವು (ವಿದ್ಯಾಭ್ಯಾಸ ಸಾಲ) www.kmdc.kar.nic.in/Arivu2

ಇತರೆ ಯೋಜನೆಗಳು ಇmಜಫಿ.ಇಚಿಡಿ.ಟಿiಫಿ.iಟಿ/ಟಂಚಿಟಿ/ಟogiಟಿ.ಚಿsಠಿx

ಮೈಕ್ರೋ ಸಾಲ(ವೈಯಕ್ತಿಕ) ಯೋಜನೆ htttps://www.kmdcmicro.kar.nic.in

**ಅಧಿಕಾರಿಯವರ ಹೆಸರು ಮತ್ತು ದೂರವಾಣಿ ಸಂಖ್ಯೆ:**

ಶ್ರೀಮತಿ.ಸೈಯಿದಾ ಆಯಿಷಾ, ಕೆ.ಎ.ಎಸ್.(ಹಿರೀಯ ಶ್ರೇಣಿ)
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಕೇಂದ್ರ ಕಛೇರಿ, ಬೆಂಗಳೂರು

ಪ್ರಥಮ ಮೇಲ್ಮನವಿ ಪ್ರಾಧಿಕಾರಿಗಳು.

ದೂರವಾಣಿ ಸಂಖ್ಯೆ: 080-228608999

ಶ್ರೀ ಸೈಯದ್ ವಜೀರ್ ಅಹಮದ್,
ಪ್ರಧಾನ ವ್ಯವಸ್ಥಾಪಕರು, (ಪ್ರಭಾರ)
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ,
ಕೇಂದ್ರ ಕಛೇರಿ, ಬೆಂಗಳೂರು.
ಸಾರ್ವಜನಿಕ ಮಾಹಿತಿ ಅಧಿಕಾರಿಗಳು.
ದೂರವಾಣಿ ಸಂಖ್ಯೆ: 080-22864782

**9. 4(1)(ಬಿ)( xii)ರನ್ವಯ ಸಬ್ಸಿಡಿ ಕಾರ್ಯಕ್ರಮಗಳ ಅನುಷ್ಠಾನ ವಿಧಾನಗಳು, ಈ ಲೆಕ್ಕ ಶೀರ್ಷಿಕೆಯಲ್ಲಿ ಹಂಚಿಕೆ ಮಾಡಿದ ಹಣ ಮತ್ತು ಫಲಾನುಭವಿಗಳ ವಿವರ.**

ನಿಗಮಕ್ಕೆ ಅಯವ್ಯಯದಲ್ಲಿ ಸರ್ಕಾರವು ಒದಗಿಸುವ ಹಣದಿಂದ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ಮಂಡಳಿಯ ಅನುಮೋದನೆಯೊಂದಿಗೆ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ(ಜಿಲ್ಲಾ ವ್ಯವಸ್ಥಾಪಕರಿಗೆ) ಕಳುಹಿಸಿಕೊಡಲಾಗುತ್ತದೆ. ನಿಗಮಕ್ಕೆ ರಾಜ್ಯ ವಲಯದಲ್ಲಿ ಪ್ಲಾನ್ ಪ್ರೋಗ್ರಾಂನಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು.

(ಪ್ರತಿ ಅನುಬಂಧ-ಆ ರಲ್ಲಿ ಲಗತ್ತಿಸಿದೆ)

**10. 4(1)(ಬಿ)( xii)ರನ್ವಯ ಸಬ್ಸಿಡಿ ಕಾರ್ಯಕ್ರಮಗಳ ಅನುಷ್ಠಾನ ವಿಧಾನಗಳು, ಈ ಲೆಕ್ಕ ಶೀರ್ಷಿಕೆಯಲ್ಲಿ ಹಂಚಿಕೆ ಮಾಡಿದ ಹಣ ಮತ್ತು ಫಲಾನುಭವಿಗಳ ವಿವರ.**

**1) ವೃತ್ತಿ ಪ್ರೋತ್ಸಾಹ ಯೋಜನೆ(ಪರಿಷ್ಕøತ):-**

1) ಸದರಿ ಯೋಜನೆಯಡಿ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತದೆ.
2) ವ್ಯಾಪಾರ, ಸೇವಾ ಉದ್ದಿಮೆಗಳು, ಕೈಗಾರಿಕೆಗಳು ಹಾಗೂ ಕೃಷಿ ಆಧಾರಿತ ಚಟುವಟಿಕೆಗಳಿಗೆ ಬ್ಯಾಂಕು/ಹಣಕಾಸು ಸಂಸ್ಥೆಗಳ ಮೂಲಕ ಸಾಲ ಸೌಲಭ್ಯ ದೊರಕಿಸಿ ಕೊಡಲಾಗುವುದು.
3) ವೃತ್ತಿ ಪ್ರೋತ್ಸಾಹ ಯೋಜನೆ(ಪರಿಷ್ಕøತ) ಒಟ್ಟು ಸಾಲ ಮೊತ್ತ ರೂ.1.00 ಲಕ್ಷದೊಳಗೆ ಇರುವ ಚಟುವಟಿಕೆಗಳಿಗೆ ಶೇ.50 ರಷ್ಟು ಸಾಲ ಹಾಗೂ ಶೇ.50 ರಷ್ಟು ಸಹಾಯಧನದೊಂದಿಗೆ ಬ್ಯಾಂಕ ಸಾಲದ ಬದಲಾಗಿ ಕರ್ನಾಟಕ ಅಲ್ಪಸಂಖ್ಯಾತ ಅಬಿವೃದ್ಧಿ ನಿಗಮದ ವತಿಯಿಂದಲೇ ಸಾಲ ಸೌಲಭ್ಯ ಅನುಷ್ಠಾನಗೊಳಿಸಲು ಅನುಕೂಲವಾಗುವಂತೆ ಪರಿಷ್ಕøತ ಸರ್ಕಾರಿ ಆದೇಶ ಹೋರಡಿಸಲಾಗಿದೆ.

   ಇದರನ್ವಯ 2020-21ನೇ ಸಆಲಿ ಲಅನ್ವಯವಾಗಯುವಂತೆ ಬ್ಯಾಂಕ್ ಸಾಲದ ಬದಲಾಗಿ ಕೆ.ಎಂ.ಡಿ.ಸಿ. ನಿಗಮದ ವತಿಯಿಂದಲೇ ಒಟ್ಟು ಸಾಲದ ಮೊತ್ತ ರೂ.1.00ಲಕ್ಷ(ಒಂದು ಲಕ್ಷ ರೂಫಾಯಿಗಳೂ) ಅದರಲ್ಲಿ ಶೇ.50 ರಷ್ಟು ಸಾಲ, ಶೇ.50 ರಷ್ಟು ಸಹಾಯ ಧನದೊಂದಿಗೆ ಷರತ್ತುಗಳಿಗೊಳಪಟ್ಟು ಅನುಷ್ಠಾನಗೊಳಿಸಲು ಅನುಮತಿ ನೀಡಿ ಕ್ಲೈಮ್ ಪತ್ರದ ಜೊತೆಗೆ ಕಮಿಟ್‌ಮೆಂಟ್ ಲೇಟರ್ನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.
4) ಆರ್ಹ ಫಲಾನುಭವಿಗಳನ್ನು ಆಯಾಯ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗುವುದು.

**2). ಅರಿವು ಯೋಜನೆ:-**

- ಈ ಯೋಜನೆಯಡಿ ಭೌತಿಕ ಗುರಿ ಮತ್ತು ಆರ್ಥಿಕ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತದೆ.
- ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳ್ಳುತ್ತಿರುವ ಅರಿವು ವಿದ್ಯಾಭ್ಯಾಸ ಸಾಲ ಯೋಜನೆಯನ್ನು 2020-21ನೇ ಸಾಲಿಗೆ ಅನ್ವಯವಾಗುವಂತೆ ಪರಿಷ್ಕøತ ಸರ್ಕಾರಿ ಆದೇಶ ಹೊರಡಿಸಿದ್ದು ಇದರನ್ವಯ ಹೊಸ (ಫ್ರೇಶ್) ಪ್ರಕರಣಗಳಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಆಯ್ಕೆಯಾದ ವಿದ್ಯಾರ್ಥಿಗಳ ಹೊರತಾಗಿ ಬೇರೆ ಯಾವ ಕೋರ್ಸುಗಳಿಗೂ ಸಾಲವನ್ನು ನೀಡಲಾಗುವುದಿಲ್ಲ. ರಿನ್ಯೂವಲ್ ಪ್ರಕರಣಗಳಲ್ಲಿ ಸರ್ಕಾರಿ ಆದೇಶವನ್ನು ಪರಿಷ್ಕರಿಸಿ ಕಾರ್ಯಗತಗೊಳಿಸಲಾಗುವುದು.
- ವೃತ್ತಿಪರ/ತಾಂತ್ರಿಕ/ಸ್ನಾತಕ ಪದವಿ/ಸ್ನಾತಕೋತ್ತರ ಪದವಿ/ಡಿಪ್ಲೋಮಾ ಶಿಕ್ಷಣ ಅಂದರೆ ವೈದ್ಯಕೀಯ, ದಂತ ವೈದ್ಯಕೀಯ, ಇಂಜಿನಿಯರಿಂಗ್, ಸ್ನಾತಕೋತ್ತರ ಪದವಿ, ಡಿಪ್ಲೋಮಾ, ನರ್ಸಿಂಗ್, ಬಿ.ಎ. ಬಿ.ಕಾಂ, ಬಿ.ಎಡ್, ಬಿಬಿಎಂ, ಬಿಸಿಎ, ಡಿ.ಎಡ್, ಐಟಿಐ ಕೋರ್ಸ್‌ನ್ನು ಮಾಡಬಯಸುವ ವಿದ್ಯಾರ್ಥಿಗಳಿಗೆ ಸಾಲ ಸೌಲಭ್ಯ ದೊರಕಿಸಿ ಕೊಡಲಾಗುವುದು.
- ಪ್ರತಿ ವರ್ಷಕ್ಕೆ ರೂ.10,000/-ದಿಂದ 2,00,000/-ಗಳವರೆಗೆ ಸಾಲವನ್ನು ಮಂಜೂರು ಮಾಡಲಾಗುತ್ತದೆ.

**3. ಶ್ರಮಶಕ್ತಿ ಯೋಜನೆ:-**

- ಈ ಯೋಜನೆಯಡಿ ಭೌತಿಕ ಗುರಿ ಮತ್ತು ಆರ್ಥಿಕ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತದೆ.
- ಸಾಂಪ್ರದಾಯಿಕ ಕುಶಲಕರ್ಮಿಗಳು ಹಾಗೂ ವೃತ್ತಿಕುಲಕಸುಬುದಾರರಿಗೆ ಸಾಲಸೌಲಭ್ಯ ನೀಡಲಾಗುತ್ತದೆ.
- ಸದರಿ ಯೋಜನೆಯಲ್ಲಿ ತಲಾ ರೂ.50000/-ಗಳವರೆಗೆ ಸಾಲ ಸೌಲಭ್ಯ ಕಲ್ಪಿಸಲಾಗುತ್ತದೆ.ಇದರಲ್ಲಿ ಶೇ.50ರಷ್ಟು ಸಾಲವನ್ನು 36 ತಿಂಗಳೂಗಳಲ್ಲಿ ಫಲಾನುಭವಿಯು ಮರುಪಾವತಿ ಮಾಡಿದಲ್ಲಿ ಉಳಿದ ಶೇ.50ರಷ್ಟು ಹಣವನ್ನು ಬ್ಯಾಕ್‌ಎಂಡ್ ಸಹಾಯಧನವನ್ನಾಗಿ ಪರಿಗಣಿಸಲಾಗುತ್ತದೆ. ಫಲಾನುಭವಿಯು 36 ತಿಂಗಳೊಳಗೆ ಮರುಪಾವತಿ ಮಾಡಲು ವಿಫಲನಾದಲ್ಲಿ ಶೇ.50ರಷ್ಟು ಬ್ಯಾಕ್‌ಎಂಡ್ ಸಹಾಯಧನವನ್ನು ಸಹ ಸಾಲವೆಂದು ಪರಿಗಣೀಸಲಾಗುತ್ತದೆ.
- ಅರ್ಹ ಫಲಾಪೇಕ್ಷಿಗಳನ್ನು ಆಯಾಯ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗುವುದು.
- ಸಾಲದ ಮೊತ್ತಕ್ಕೆ ಶೇ.4ರಷ್ಟು ಬಡ್ಡಿ ವಿಧಿಸಲಾಗುವುದು.

**4). ಅ) ಸಣ್ಣ (ಮೈಕ್ರೋ)ಸಾಲ(ಗುಂಪು ಸಾಲ) ಹಾಗೂ ಸಹಾಯಧನ ಯೋಜನೆ:-**

- ಈ ಯೋಜನೆಯಡಿ ಭೌತಿಕ ಗುರಿ ಮತ್ತು ಆರ್ಥಿಕ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತದೆ.
- ಸ್ವ-ಸಹಾಯ ಗುಂಪಿನ ಮೂಲಕ ಅನುಷ್ಠಾನಗೊಳಿಸಿ ಸಾಲಸೌಲಭ್ಯ ನೀಡಲಾಗುತ್ತದೆ.
- ಸದರಿ ಯೋಜನೆಯಡಿಯಲ್ಲಿ ತಲಾ 5,000-00 ಸಾಲ, 5,000-00 ಸಹಾಯಧನ ನೀಡಲಾಗುವುದು.
- ಅರ್ಹ ಫಲಾಪೇಕ್ಷಿಗಳನ್ನು ಆಯಾಯ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗುವುದು.

**ಆ) ಮೈಕ್ರೋ ಸಾಲ ಯೋಜನೆ(ವೈಯುಕ್ತಿಕ) ಮಹಿಳೆಯರಿಗೆ ಮಾತ್ರ(2020.21ನೇ ಸಾಲಿಗೆ ಮಾತ್ರ)**

ಕೋವಿಡ್-19 ಪಿಡುಗಿ ನಿಂದಾಗಿ ತೊಂದರೆ ಗೊಳಗಾದ, ನಿಗಮದ ಯಾವುದೇ ಯೋಜನೆಯಲ್ಲೂ ಇದುವರೆಗೆಸಾಲ,ಸಹಾಯಧನ ಯಾವುದನ್ನೂ ಪಡೆಯದ ಕಡುಬಡತನದಲ್ಲಿರುವ ಅಲ್ಪಸಂಖ್ಯಾತ ಸಮುದಾಯದ 23,000 ಬಿಪಿಎಲ್ ಕಾರ್ಡ್ ಹೊಂದಿರುವ 25 ರಿಂದ 50 ವಯೋಮಾನದೊಳಗಿನ ಮಹಿಳೆಯರಿಗೆ, ತಳ್ಳುವಗಾಡಿಯಲ್ಲಿ ವ್ಯಾಪಾರ, ಬೀದಿವ್ಯಾಪಾರ, ಜಾತ್ರೆಗಳಲ್ಲಿ ವ್ಯಾಪಾರ, ಕಿರಾಣಿ ಅಂಗಡಿ, ಅರಿಷಿನ / ಕುಂಕುಮ/ ಅಗರಬತ್ತಿ/ ಕರ್ಪೂರ, ಪಾದಚಾರಿ ಮಾರ್ಗದಲ್ಲಿ, ಟೀ / ಕಾಪಿಮಾರಾಟ, ಎಳನೀರು ವ್ಯಾಪಾರ, ಹೂವಿನ ವ್ಯಾಪಾರ, ತರಕಾರಿ ವ್ಯಾಪಾರ, ಹಣ್ಣಿನ ವ್ಯಾಪಾರ, ಇನ್ನಿತರ ಸಣ್ಣ ವ್ಯಾಪಾರ ನಡೆಸಲು ಆರಂಭಿಕ ಬಂಡವಾಳಕ್ಕಾಗಿ ರೂ.10,000/-ಮೊತ್ತದ (ರೂ.8000/-ಸಾಲ +ರೂ.2,000/-ಸಬ್ಸಿಡಿ) ಅಲ್ಪಾವಧಿ ಸಾಲ ಯೋಜನೆಯಾಗಿರುತ್ತದೆ.

**5. ಗಂಗಾ ಕಲ್ಯಾಣ ಯೋಜನೆ:-**

- ಈ ಯೋಜನೆಯಡಿ ಭೌತಿಕ ಗುರಿ ಮತ್ತು ಆರ್ಥಿಕ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತದೆ.
- ಕನಿಷ್ಠ 1.50 ಎಕೆರೆಯಿಂದ 5.00 ಎಕೆರೆ ಒಳಗೆ ಜಮೀನು ಹೊಂದಿರುವ ಆಯ್ಕೆಯಾದ ಫಲಾನುಭವಿಗಳಿಗೆ ಕೊಳವೆ ಬಾವಿ ಕೊರೆದು ವಿದ್ಯೂದ್ದಿಕರಣ ನೀಡಲಾಗುವುದು.
- ಸದರಿ ಯೋಜನೆಯಡಿಯಲ್ಲಿ ರೂ. 2,00,000/- ಗಳಿಂದ ರೂ.3,00,000/-ಗಳವರೆಗೆ ಸಹಾಯಧನವಾಗಿರುತ್ತದೆ.
- ಅರ್ಹ ಫಲಾಫೇಕ್ಷಿಗಳನ್ನು ಆಯಾಯ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ಆಯ್ಕೆ ಸಮಿತಿಯಲ್ಲಿ ಆಯ್ಕೆ ಮಾಡಲಾಗುವುದು.
- ಸಾಲದ ಮೊತ್ತಕ್ಕೆ ಶೇ.4ರಷ್ಟು ಬಡ್ಡಿ ವಿಧಿಸಲಾಗುವುದು.

**6). ಪಶುಸಂಗೋಪನೆ ಯೋಜನೆ, (ಗ್ರಾಮೀಣ ಮಹಿಳೆಯರಿಗೆ ಮಾತ್ರ):-**

- ಈ ಯೋಜನೆಯಡಿ ಭೌತಿಕ ಗುರಿ ಮತ್ತು ಆರ್ಥಿಕ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತದೆ.
- ಸದರಿ ಯೋಜನೆಯಲ್ಲಿ ರೂ. 20,000-00 ಸಾಲ, ರೂ.20,000-00 ಸಹಾಯಧನ ನೀಡಲಾಗುವುದು.
- ಗ್ರಾಮೀಣ ಮಹಿಳೆಯರಿಗೆ ಹೈನುಗಾರಿಕೆ, ಕೋಳಿಸಾಕಾಣಿಕೆ, ಕುರಿ ಸಾಕಾಣಿಕೆ ಉದ್ದೇಶಗಳಿಗೆ ಸಾಲಸೌಲಭ್ಯ ನೀಡಲಾಗುವುದು.
- ಫಲಾನುಭವಿಗಳನ್ನು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲಾಗುವುದು.
- ಸಾಲದ ಮೊತ್ತಕ್ಕೆ ಶೇ.3ರಷ್ಟು ಬಡ್ಡಿ ವಿಧಿಸಲಾಗುವುದು

**7). ಅಲ್ಪಸಂಖ್ಯಾತರ ರೈತರ ಕಲ್ಯಾಣ ಯೋಜನೆ:-**

- ಈ ಯೋಜನೆಯಡಿ ಭೌತಿಕ ಗುರಿ ಮತ್ತು ಆರ್ಥಿಕ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತದೆ.
- ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಆರ್ಥಿಕವಾಗಿ ಹಾಗೂ ಕೃಷಿ ಚಟುವಟಿಕೆಗಳಿಗೆ ಸಾಲಸೌಲಭ್ಯ ನೀಡಲಾಗುವುದು.
- ಸದರಿ ಯೋಜನೆಯಲ್ಲಿ ರೂ.50,000-00 ಸಾಲ, ರೂ.50,000-00 ಸಹಾಯಧನ ನೀಡಲಾಗುವುದು.
- ಫಲಾನುಭವಿಗಳನ್ನು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲಾಗುವುದು.
- ಸಾಲದ ಮೊತ್ತಕ್ಕೆ ಶೇ.3ರಷ್ಟು ಬಡ್ಡಿ ವಿಧಿಸಲಾಗುವುದು.

**8) ಆಟೋ ಮೊಬೈಲ್ ಸರ್ವೀಸ್ ಮತ್ತು ರೇಷ್ಮ ಉದ್ಯಮಕ್ಕೆ ತರಬೇತಿ ಮತ್ತು ಸಾಲ ಯೋಜನೆ:-**

- ಈ ಯೋಜನೆಯಡಿ ಭೌತಿಕ ಗುರಿ ಮತ್ತು ಆರ್ಥಿಕ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತದೆ.
- ಆಟೋ ಮೊಬೈಲ್ ಸರ್ವೀಸ್, ಬಿದರಿ ಮತ್ತು ರೇಷ್ಮೆ ಚಟುವಟಿಕೆಗಳಿಗೆ ತರಬೇತಿ ಪಡೆದ ನಂತರ ಸಾಲಸೌಲಭ್ಯ ನೀಡಲಾಗುವುದು.
- ಸದರಿ ಯೋಜನೆಯಲ್ಲಿ ರೂ. 50,000-00 ಸಾಲ, ರೂ.50,000-00 ಸಹಾಯಧನ ನೀಡಲಾಗುವುದು.
- ಫಲಾನುಭವಿಗಳನ್ನು ಮಾನ್ಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲಾಗುವುದು.
- ಸಾಲದ ಮೊತ್ತಕ್ಕೆ ಶೇ.3ರಷ್ಟು ಬಡ್ಡಿ ವಿಧಿಸಲಾಗುವುದು.

**9)ಟ್ಯಾಕ್ಸಿ/ಗೂಡ್ಸ್ ವಾಹನ ಖರೀದಿಗಾಗಿ ಸಹಾಯಧನ:-**

- 2020-21ನೇ ಸಾಲಿಗೆ ಮಾತ್ರ ಅನ್ವಯವಾಗುವಂತೆ ಗರಿಷ್ಠ ರೂ.75000/-ಗಳಿಗೆ ಇಳಿಕೆ ಮಾಡಿ ಕಾರ್ಯಗತಗೊಳಿಸಲು ಅನುಮತಿ ನೀಡಿ ಭೌತಿಕ ಗುರಿ ಮತ್ತು ಆರ್ಥಿಕ ಗುರಿ ನಿಗದಿಪಡಿಸಲಾಗಿದೆ.
- ಸದರಿ ಯೋಜನೆಯಡಿ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತದೆ.
- ತಲಾ 75000/- ರೂ. ಸಹಾಯಧನ ಹಾಗೂ ಉಳಿದ ಹಣ ಬ್ಯಾಂಕ್ ಸಾಲ ಪಡೆಯಬಹುದು.
- ಫಲಾನುಭವಿಗಳನ್ನು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲಾಗುವುದು.
- ಉಳಿದಂತೆ ಈ ಯೋಜನೆಯ ಅನುಷ್ಠಾನದಲ್ಲಿ ಅನುಸರಿಸಲಾಗುತ್ತಿರುವ ಷರತ್ತುಗಳಿಗೆ ಯಾವುದೇ ಬದಲಾವಣೆ ಇರುವುದಿಲ್ಲ.

**10) .ಮನೆ ಮಳಿಗೆ ಯೋಜನೆ:-**

* ಈ ಯೋಜನೆಯಡಿ ಭೌತಿಕ ಗುರಿ ಮತ್ತು ಆರ್ಥಿಕ ಗುರಿ ನಿಗದಿಪಡಿಸಲಾಗಿದೆ.

5) ಸದರಿ ಯೋಜನೆಯಡಿ ಜಿಲ್ಲಾ ವ್ಯವಸ್ಥಾಪಕರ ಕಛೇರಿಯಲ್ಲಿ ಅರ್ಜಿಗಳು ಸ್ವೀಕೃತವಾಗುತ್ತದೆ.

- ಈ ಯೋಜನೆಯಲ್ಲಿ ಕೋಮುಗಲಭೆ ಮತ್ತು ಕೋಮು ಹಿಂಸಾಚಾರ ಹಾಗೂ ಪರಿಸರ ವಿಕೋಪಗಳಿಂದ ಹಾನಿಗೊಳಗಾದವರಿಗೆ ಸಾಲ ಸೌಲಭ್ಯ ನೀಡಲಾಗುವುದು.
- ರೂ. 5.00 ಲಕ್ಷಗಳ ಘಟಕ ವೆಚ್ಚಕ್ಕೆ ಶೇ.50ರಷ್ಟು ಸಹಾಯಧನ ಮತ್ತು 3ರ ಬಡ್ಡಿದರದಲ್ಲಿ ಶೇ.50ರಷ್ಟು ಸಾಲವನ್ನು ನೀಡಲಾಗುವುದು.
- ಫಲಾನುಭವಿಗಳನ್ನು ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲಾಗುವುದು.

**12). ಗೃಹ ನಿರ್ಮಾಣ ಮಾರ್ಜಿನ್ ಹಣ ಸಾಲ ಯೋಜನೆ:-**

ಈ ಯೋಜನೆಯಡಿಯಲ್ಲಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಅಂದರೆ ರಾಜೀವ್‌ಗಾಂಧಿ ಗೃಹ ನಿರ್ಮಾಣ ನಿಗಮ, ಕರ್ನಾಟಕ ಗೃಹ ಮಂಡಳಿ, ಕೊಳಚೆ ನಿರ್ಮೂಲನ ಮಂಡಳಿ ಹಾಗೂ ಇತರೆ ಸರ್ಕಾರಿ ಸ್ವಾಮ್ಯದ ಮೂಲಕ ವಿವಿಧ ಗೃಹ ನಿರ್ಮಾಣ ಯೋಜನೆಗಳ ಅಡಿಯಲ್ಲಿ ಆಯ್ಕೆ ಯಾಗುವ ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತರ ಫಲಾನುಭವಿಗಳಿಗೆ ಗೃಹ ನಿರ್ಮಾಣ ಮಾಡಲು ಗೃಹ ನಿರ್ಮಾಣದ ಘಟಕ ವೆಚ್ಚದ್ವನಯ ನಿಗದಿಪಡಿಸಲಾಗುವ ಫಲಾನುಭವಿಯ ವಂತಿಕೆಯನ್ನು (ಃeಟಿeಜಿiಛಿಚಿಡಿies ಅಂಟಿಣಡಿibuಣioಟಿ)ಗರಿಷ್ಠ ರೂ.1.00 ಲಕ್ಷಗಳವರೆಗೆ ಮಾರ್ಜಿನ್ ಹಣ ಸಾಲವನ್ನಾಗಿ ಶೇ.4ರ ಬಡ್ಡಿದರದಲ್ಲಿ ಫಲಾನುಭವಿಯ ಪರವಾಗಿ ನಿರ್ಮಾಣ ಮಾಡುವ ಸಂಸ್ಥೆಗಗಳಿಗೆ ಒಡಂಬಡಿಕೆಯ ಮೂಲಕ ಬಿಡುಗಡೆ ಮಾಡಲಾಗುವುದು.

**12) 4(1)(ಬಿ)(xiv)ಮತ್ತು 4(1)(ಬಿ)(xv)ರನ್ವಯ ಸಂಸ್ಥೆಯು ಹೊಂದಿರುವ/ ಸಂಸ್ಥೆಯಿಂದ ದೊರೆಯುವ ಇಲ್ಲವೆ ಎಲೆಕ್ಟ್ರಾನಿಕ್ ಡಿಸ್ಕ್‌ನಲ್ಲಿ ಅಳವಡಿಸಿರುವ ಸಂಸ್ಥೆಯ ಮಾಹಿತಿ ವಿವರ ಹಾಗೂ ನಾಗರೀಕರಿಗೆ ಮಾಹಿತಿಯನ್ನು ಪಡೆಯುವ ವಿವರ ಮತ್ತು ಸಂಸ್ಥೆಯ ಕೆಲಸದ ಅವಧಿ ಇತ್ಯಾದಿ.**

ನಿಗಮದಿಂದ ಲಭ್ಯವಿರುವ ಯೋಜನೆಗಳ ಮಾಹಿತಿಯನ್ನು ಮತ್ತು ಸಾರ್ವಜನಿಕರು ಸಂಸ್ಥೆಯಿಂದ ಸೌಲಭ್ಯ ಪಡೆಯುವಲ್ಲಿ ಸಲ್ಲಿಸಬೇಕಾದ ಅರ್ಜಿ ಹಾಗೂ ಮಾಹಿತಿಯನ್ನು ನಿಗಮದ ಕೇಂದ್ರ ಕಛೇರಿಯ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗುತ್ತದೆ. ಇದರ ಜೊತೆ ಈ ಕೆಳಕಂಡ ಕ್ರಮಗಳನ್ನು ಪ್ರಚಾರಕ್ಕಾಗಿ ವಹಿಸಲಾಗಿದೆ.

1. ನಿಗಮದ ಯೋಜನೆಗಳ ಪ್ರಚಾರಕ್ಕೆ ಸಂಬಂಧಿಸಿದಂತೆ ಕರ ಪತ್ರಗಳನ್ನು/ಕಿರುಹೊತ್ತಿಗೆಗಳನ್ನು ಮುದ್ರಣ ಮಾಡಿ ಚರ್ಚ್ ಮಸೀದಿಗಳಿಗೆ ಮತ್ತು ಜೈನ ಬಸೀದಿಗಳಿಗೆ ಕಳುಹಿಸಿಕೊಡಲಾಗುತ್ತದೆ.
2. ಜಿಲ್ಲಾ ವ್ಯವಸ್ಥಾಪಕರು ಸ್ಥಳಿಯ ಪತ್ರಿಕೆಗಳಲ್ಲಿ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಅರ್ಜಿಗಳನ್ನು ಆಹ್ವಾನಿಸಿ ಪ್ರಕಟಣೆÉ ನೀಡಲಾಗುತ್ತದೆ.
3. ವೃತ್ತಿ ಕುಲಕಸುಬುದಾರರ ಮುಖಂಡರನ್ನು ಕೆಲವು ಜನಾಂಗಗಳ ಮುಖಂಡರನ್ನು ಆಹ್ವಾನಿಸಿ ಸಭೆಯನ್ನು ನಡೆಸಲಾಗಿದೆ. ಅವರಿಗೂ ಸಹ ಕರ ಪತ್ರಗಳನ್ನು/ಕಿರು ಹೊತ್ತಿಗೆಗಳನ್ನು ನೀಡಿ ಅವರುಗಳ ಸಂಘ ಸಂಸ್ಥೆಗಳ ಪ್ರತಿನಿಧಿಗಳಿಗೆ ನೀಡುವಂತೆ ತಿಳಿಸಲಾಗಿರುತ್ತದೆ.
4. ನಿಗಮದ ಜಿಲ್ಲೆಯ ವ್ಯವಸ್ಥಾಪಕರು ಪ್ರವಾಸ ಕಾಲದಲ್ಲಿ ವಿವಿಧ ಯೋಜನೆಗಳಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳೊಂದಿಗೆ ಘಟಕ ತಪಾಸಣೆಗಳನ್ನು ನಿರ್ವಹಿಸುತ್ತಾರೆ.
5. ಪ್ರತಿ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಆಯಾ ವರ್ಷದ ಗುರಿಯನ್ನು ನಮೂದಿಸಿ ಯೋಜನೆಗಳ ವಿವರಗಳನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಯ ಅಧಿಕಾರಿಗಳಿಗೆ ಕಳುಹಿಸಿಕೊಡಲಾಗುತ್ತದೆ. ಅವರೂ ಸಹ ಸುದ್ದಿ ರೂಪದಲ್ಲಿ ನಿಗಮದ ಯೋಜನೆಗಳ ಬಗ್ಗೆ ವಿವಿಧ ಪತ್ರಿಕೆಗಳಲ್ಲಿ ಪ್ರಚಾರ ಮಾಡಲಾವುದು ಹಾಗೂ ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರ ಅಧೀನದಲ್ಲಿರುವ ಮಾಹಿತಿ ಕೇಂದ್ರಗಳ ಮೂಲಕ ಪ್ರಚಾರ ಮಾಡಲಾಗುತ್ತಿದೆ.
6. ಅರಿವು ಯೋಜನೆಯ ಬಗ್ಗೆ ಎಲ್ಲಾ ವೃತ್ತಿಪರ ಕಾಲೇಜುಗಳ ನೋಟಿಸ್ ಬೋರ್ಡ್‌ನಲ್ಲಿ ಪ್ರಕಟಿಸಲು ಸಂಕ್ಷಿಪ್ತ ಮಾಹಿತಿಯನ್ನು ನೀಡಿ ಕಳುಹಿಸಿಕೊಡಲಾಗುವುದು. ಅದೇ ರೀತಿ ನಿಗಮದ ಯೋಜನೆಗಳ ಸಂಕ್ಷಿಪ್ತ ಮಾಹಿತಿಯನ್ನು ಎಲ್ಲಾ ಜಿಲ್ಲಾ ಪಂಚಾಯತ್/ತಾಲ್ಲೂಕು ಪಂಚಾಯತ್ ನೋಟಿಸ್ ಬೋರ್ಡ್‌ಗಳಲ್ಲಿ ಪ್ರಕಟಿಸುವಂತೆಯೂ ಸಹ ಮಾಹಿತಿಯನ್ನು ಕಳುಹಿಸಿಕೊಡಲಾಗುವುದು.
7. ನಿಗಮದ ಅಧಿಕಾರಿಗಳು ಘಟಕ ಪರಶೀಲನೆ ಮತ್ತು ಸಾಲ ವಸೂಲಾತಿಗೆ ಗ್ರಾಮಗಳಿಗೆ ಭೇಟಿ ನೀಡಿದಾಗ ಯೋಜನೆಗಳ ಬಗ್ಗೆ ಆ ಗ್ರಾಮದ ಜನರಿಗೆ ವಿವರಣೆ ನೀಡಲಾಗುತ್ತದೆ.
8. ಸಂಸ್ಥೆಯ ಕೆಲಸದ ಅವಧಿ: ಸೋಮವಾರದಿಂದ ಶನಿವಾರದವರೆಗೆ ಬೆಳಗ್ಗೆ 10-00 ಗಂಟೆಯಿಂದ ಸಾಯಂಕಾಲ 5.30 ಗಂಟೆಯವರೆಗೆ ಕಾರ್ಯ ನಿರ್ವಹಿಸುತ್ತದೆ. ಎಲ್ಲಾ ಭಾನುವಾರ, ಪ್ರತಿ ತಿಂಗಳ 2ನೇ ಮತ್ತು 4ನೇ ಶನಿವಾರ ಮತ್ತು ಸರ್ಕಾರ ಘೋಷಿಸಿರುವ ರಜಾ ದಿನಗಳಂದು ಸಂಸ್ಥೆಯು ಮುಚ್ಚಿರುತ್ತದೆ.
9. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಕೇಂದ್ರ ಕಛೇರಿಯು: 12ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಡಾ||ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-560001 ಈ ವಿಳಾಸದಲ್ಲಿ ಕಾರ್ಯನಿರ್ವಹಿಸುತ್ತಿದೆ.

## 13) 4(1)(ಬಿ)(xvi) ರನ್ವಯ ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿವರ, ಹೆಸರು ಹುದ್ದೆ ಮತ್ತೀತರ ವಿವರಗಳು.

2005ರ ಮಾಹಿತಿ ಹಕ್ಕು ಕಾಯ್ದೆ ಅನ್ವಯ (ಕೇಂದ್ರ ಕಾಯ್ದೆ ಸಂಖ್ಯೆ:22/2005) ಸಾರ್ವಜನಿಕ ಪ್ರಾಧಿಕಾರವು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದ ಪ್ರಕಾರ್ಯಗಳನ್ನು ಈ ಕಾಯ್ದೆಯಡಿಯಲ್ಲಿ ನಿರ್ವಹಿಸಲು ಹಾಗೂ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಲು ಈ ಕೆಳಕಂಡವರನ್ನು ನೇಮಕ ಮಾಡಲಾಗಿದೆ.

1 Appelate Authority
**ಮೇಲ್ಮನವಿ ಪ್ರಾಧಿಕಾರ**
(ಅhಚಿಠಿಣeಡಿ 5, Seಛಿ 19(1) ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ,
12ನೇ ಮಹಡಿ, ಮುಖ್ಯ ಗೋಪುರ, ವಿಶ್ವೇಶ್ವರಯ್ಯ ಕೇಂದ್ರ,
ಡಾ|| ಬಿ ಆರ್ ಅಂಬೇಡ್ಕರ್ ವೀದಿ, ಬೆಂಗಳೂರು-560001

**2 Public Information Officer**
**ಅಧಿಕಾರಿ** (ಅhಚಿಠಿಣeಡಿ 2, Sec 5(1)
ಕೇಂದ್ರ ಕಛೇರಿಗೆ ಸಂಬಂಧಿಸಿದಂತೆ
ಪ್ರಧಾನ ವ್ಯವಸ್ಥಾಪಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, 12ನೇ ಮಹಡಿ, ಮುಖ್ಯ ಗೋಪುರ,
ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ ಆರ್ ಅಂಬೇಡ್ಕರ್ ವೀದಿ, ಬೆಂಗಳೂರು-560001

**3 Public Information Officer**
**ಸಾರ್ವಜನಿಕ ಮಾಹಿತಿ ಅಧಿಕಾರಿ**
(ಅhಚಿಠಿಣeಡಿ 2, Seಛಿ 5(1) ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದಂತೆ ಸಂಬಂಧಿಸಿದ
ಎಲ್ಲಾ ಜಿಲ್ಲೆಗಳ ಜಿಲ್ಲಾ ವ್ಯವಸ್ಥಾಪಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ,

ಸಂಬಂಧಿಸಿದ ಎಲ್ಲಾ ಜಿಲ್ಲೆಗಳ ಜಿಲ್ಲಾ ವ್ಯವಸ್ಥಾಪಕರುಗಳನ್ನು ಚಾಪ್ಟರ್ 2, ಸೆಕ್ಷನ್ 2(2)ರನ್ವಯ ಜಿಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

**14)  4(1)(ಬಿ)(xvii) ರನ್ವಯ ನಿಗಧಿಪಡಿಸಲಾದ ಇನ್ನಿತರ ಮಾಹಿತಿಗಳು:**

ಪ್ರಸ್ತುತ ಇರುವ ಮಾಹಿತಿಯನ್ನು ಅಳವಡಿಸಲಾಗಿದೆ. ಮುಂದಿನ ಪ್ರಕಟಣೆಯಲ್ಲಿ ಹೆಚ್ಚಿನ ಮಾಹಿತಿ ಕಂಡು ಬಂದರೆ, ಆ ಕಂಡಿಕೆಯಲ್ಲಿ ನಮೂದಿಸಿ ಪ್ರಕಟಿಸಲಾಗುವುದು.

ಪ್ರಧಾನ ಹಣಕಾಸು ಅಧಿಕಾರಿ,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ದಿ ನಿಗಮ(ನಿ)

ಕಂಪೆನಿ ಕಾರ್ಯದರ್ಶಿ
ಕರ್ನಾಟಕ ಅಲ್ಪಸಂಖ್ಯಾತರ
ಅಭಿವೃದ್ದಿ ನಿಗಮ(ನಿ)

ಪ್ರಧಾನ ವ್ಯವಸ್ಥಾಪಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ದಿ ನಿಗಮ(ನಿ)

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಅಲ್ಪಸಂಖ್ಯಾತರ
ಅಭಿವೃದ್ದಿ ನಿಗಮ(ನಿ),

**4(1)(ಬಿ)(xvi) ರನ್ವಯ ಸಾರ್ವಜನಿಕ ಮಾಹಿತಿ ಅಧಿಕಾರಿಯ ವಿವರ, ಹುದ್ದೆ ಮತ್ತಿತರ ವಿವರಗಳು-ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಕೇಂದ್ರ ಕಛೇರಿ, ಬೆಂಗಳೂರು**

2005ರ ಮಾಹಿತಿ ಹಕ್ಕು ಕಾಯ್ದೆ ಅನ್ವಯ (ಕೇಂದ್ರ ಕಾಯ್ದೆ ಸಂಖ್ಯೆ:22/2005) ಸಾರ್ವಜನಿಕ ಪ್ರಾಧಿಕಾರವು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದ ಪ್ರಕಾರ್ಯಗಳನ್ನು ಈ ಕಾಯ್ದೆಯಡಿಯಲ್ಲಿ ನಿರ್ವಹಿಸಲು ಹಾಗೂ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಲು ಈ ಕೆಳಕಂಡವರನ್ನು ನೇಮಕ ಮಾಡಲಾಗಿದೆ.

1 ೦೦೧೧eಟಟಚಿಣe ೦uಣhoಡಿiಣಥಿ

ಪ್ರಥಮ ಮೇಲ್ಮನವಿ ಪ್ರಾಧಿಕಾರ

(ಅhಚಿ೧ಣeಡಿ 5, Seಛಿ 19(1) ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, 12ನೇ ಮಹಡಿ, ಮುಖ್ಯ ಗೋಪುರ, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ ಆರ್ ಅಂಬೇಡ್ಕರ್ ವೀದಿ, ಬೆಂಗಳೂರು-560001

2 Pubಟiಛಿ Iಟಿಜಿoಡಿmಚಿಣioಟಿ ಔಜಿಜಿiಛಿeಡಿ

ಸಾರ್ವಜನಿಕ ಮಾಹಿತಿ ಅಧಿಕಾರಿ

(ಅhಚಿ೧ಣeಡಿ 2, Seಛಿ 5(1) ಕೇಂದ್ರ ಕಛೇರಿಗೆ ಸಂಬಂಧಿಸಿದಂತೆ ಪ್ರಧಾನ ವ್ಯವಸ್ಥಾಪಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, 12ನೇ ಮಹಡಿ, ಮುಖ್ಯ ಗೋಪುರ, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ ಆರ್ ಅಂಬೇಡ್ಕರ್ ವೀದಿ, ಬೆಂಗಳೂರು-560001

3 Pubಟiಛಿ Iಟಿಜಿoಡಿmಚಿಣioಟಿ ಔಜಿಜಿiಛಿeಡಿ

ಸಾರ್ವಜನಿಕ ಮಾಹಿತಿ ಅಧಿಕಾರಿ

(ಅhಚಿ೧ಣeಡಿ 2, Seಛಿ 5(1) ಜಿಲ್ಲಾ ಮಟ್ಟಕ್ಕೆ ಸಂಬಂಧಿಸಿದಂತೆ ಸಂಬಂಧಿಸಿದ ಎಲ್ಲಾ ಜಿಲ್ಲೆಗಳ ಮಾನ್ಯ ಜಿಲ್ಲಾ ವ್ಯವಸ್ಥಾಪಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ,
ಸಂಬಂಧಿಸಿದ ಎಲ್ಲಾ ಜಿಲ್ಲೆಗಳ ಜಿಲ್ಲಾ ವ್ಯವಸ್ಥಾಪಕರುಗಳನ್ನು ಚಾಪ್ಟರ್ 2, ಸೆಕ್ಷನ್ 2(2)ರನ್ವಯ ಜಿಲ್ಲಾ ಸಾರ್ವಜನಿಕ ಮಾಹಿತಿ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

ಸಹಿ/-

ವ್ಯವಸ್ಥಾಪಕ ನಿರ್ದೇಶಕರು.

4(1)(ಬಿ)( ix)ರನ್ವಯ ಸಂಸ್ಥೆಯ ಅಧಿಕಾರಿಗಳ ಮತ್ತು ದೂರವಾಣಿ ವಿವರಗಳು:

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಅಧಿಕೃತ ಕಛೇರಿಯ ವಿಳಾಸ ಮತ್ತು ದೂರವಾಣಿ ಸಂಖ್ಯೆ ಹಾಗೂ ಅಧಿಕಾರಿಗಳ ಹೆಸರು ಮತ್ತು ದೂರವಾಣಿ ಸಂಖ್ಯೆ ಈ ಮುಂದಿನಂತೆ ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಿಸಿದೆ.

ಸಂಸ್ಥೆಯ ವಿಳಾಸ

ಕೇಂದ್ರ ಕಛೇರಿ: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ(ನಿ),
ಬೆಂಗಳೂರು
ವಿಶ್ವೇಶ್ವರಯ್ಯ ಕೇಂದ್ರ, 12ನೇ ಮಹಡಿ, ಮುಖ್ಯ ಗೋಪುರ,
ಡಾ||ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-560001.
ದೂರವಾಣಿ ಸಂಖ್ಯೆ: 080-22860999
080-22864782

ಇ-mಚಿiಟ:ಞmಜಛಿ.ho.iಟಿಜಿo@gmಚಿiಟ.ಛಿom

Websiಣe:ತಿತಿತಿ.ಞmಜಛಿ.ಞಚಿಡಿ.ಟಿiಛಿ.iಟಿ

ಅಧಿಕಾರಿಯವರ ಹೆಸರು ಮತ್ತು ದೂರವಾಣಿ ಸಂಖ್ಯೆ:

ಶ್ರೀಮತಿ.ಸೈಯಿದಾ ಆಯಿಷಾ, ಕೆ.ಎ.ಎಸ್.(ಹಿರೀಯ ಶ್ರೇಣಿ)

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ,
ಕೇಂದ್ರ ಕಛೇರಿ, ಬೆಂಗಳೂರು
ಪ್ರಥಮ ಮೇಲ್ಮನವಿ ಪ್ರಾಧಿಕಾರಿಗಳು.
ದೂರವಾಣಿ ಸಂಖ್ಯೆ: 080-228608999

ಶ್ರೀ ಸೈಯದ್ ವಜೀರ್ ಅಹಮದ್,
ಪ್ರಧಾನ ವ್ಯವಸ್ಥಾಪಕರು,
ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ,
ಕೇಂದ್ರ ಕಛೇರಿ, ಬೆಂಗಳೂರು.
ಸಾರ್ವಜನಿಕ ಮಾಹಿತಿ ಅಧಿಕಾರಿಗಳು.
ದೂರವಾಣಿ ಸಂಖ್ಯೆ: 080-22864782

ಸಹಿ/-
ವ್ಯವಸ್ಥಾಪಕ ನಿರ್ದೇಶಕರು.